


International Journal of Kannada Research
www.kannadajournal.com

**ISSN: 2454–5813**
IJKR 2024; 10(3): 16-22
© 2024 IJKR
www.kannadajournal.com
Received: 13-05-2024
Accepted: 19-06-2024

**ಅಂಜಿನಪ್ಪ ಡಿ**
ಸಹಾಯಕ ಪ್ರಾಧ್ಯಾಪಕರು. ಕನ್ನಡ ವಿಭಾಗ, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು. ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ಅಂಜಿನಪ್ಪ ಡಿ**
ಸಹಾಯಕ ಪ್ರಾಧ್ಯಾಪಕರು. ಕನ್ನಡ ವಿಭಾಗ, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು. ದಾವಣಗೆರೆ, ಕರ್ನಾಟಕ, ಭಾರತ

# ಪ್ರಭುತ್ವದ ಪರಿಕಲ್ಪನೆ: ಸಾಂಸ್ಕೃತಿಕ ಸಂರಚನೆ

**ಅಂಜಿನಪ್ಪ ಡಿ.**

**DOI:** https://doi.org/10.22271/24545813.2024.v10.i3a.982

**ಪೀಠಿಕೆ**

‘ಪ್ರಭುತ್ವ’ ಎನ್ನುವ ಪದ ಬಹುಮುಖಿಯಾದುದ್ದು. ನಿಘಂಟುಗಳಲ್ಲಿ ಪ್ರಭುತ್ವಕ್ಕೆ ಹಲವಾರು ಅರ್ಥಗಳನ್ನು ಸೂಚಿಸಲಾಗಿದೆ. ರಾಜ, ಅರಸು, ಒಡೆಯ, ಆರ್ಯ, ಪರಿವೃತ, ಸ್ವಾಮಿ, ಅಧಿಪತಿ ಎಂಬ ಅರ್ಥಗಳನ್ನು, ಪ್ರಭು ಎಂಬುದಕ್ಕೆ ಅರ್ಥೈಸುವ ಮತ್ತು ಪ್ರಭುತೆಃ ಎಂಬುದಕ್ಕೆ ಪ್ರಭುವಾಗಿರುವಿಕೆ, ರಾಜನ ಅಧಿಕಾರ, ಪ್ರಭುತ್ವವೆಂಬ ಗ್ರಹಿಕೆಯಲ್ಲಿ ಹೇಳಲಾಗಿದೆ. ಹಾಗೆನೆ ಒಡೆತನ (owner ship), ಅಧಿಕಾರವೆಂಬುದನ್ನು, ಪ್ರಭುತ್ವದ ಅರ್ಥವಾಗಿ ಕನ್ನಡ ನಿಘಂಟಿನಲ್ಲಿ ಸೂಚಿಸಲಗಿದೆ. ಮುಂದುವರೆದು (ರಾಜನೆ) ಮಂತ್ರಶಕ್ತಿ, ಪ್ರಭುಶಕ್ತಿ, ಮತ್ತು ಉತ್ಸಾಹಶಕ್ತಿಗಳೆಂಬ ಮೂರು ಶಕ್ತಿಗಳಲ್ಲಿ ಪ್ರಭುತ್ವ ಒಂದು ಎನ್ನಲಾಗಿದೆ. ದೇಹಬಲ ಮತ್ತು ದಂಡಿಸುವ ಶಕ್ತಿ ಇವುಗಳಿಂದ ಬರುವ ತೇಜಸ್ಸು, ವರ್ಚಸ್ಸು, ಆಳುವ ಶಕ್ತಿಯೆಂದು ಕೇಶಿರಾಜ ಕರೆದಿರುವನು.

ರಾಜ ನೀತಿಯಲ್ಲಿ ಮಂತ್ರಶಕ್ತಿ, ಪ್ರಭುಶಕ್ತಿ, ಮತ್ತು ಉತ್ಸಾಹಶಕ್ತಿಗಳೆಂಬ ಮೂರು ಶಕ್ತಿಗಳಲ್ಲಿ ಪ್ರಭುತ್ವವೆಂಬುದು ಒಂದು. ರಾಜನ ಅಧಿಕಾರದಿಂದ ಬರುವ ಶಕ್ತಿಯನ್ನು ಪ್ರಭುಶಕ್ತಿಯೆಂದು ನಿಘಂಟಿನಲ್ಲಿ ಅರ್ಥೈಯಿಸಲಾಗಿದೆ. ಕಿಟೆಲ್‌ರ ಕನ್ನಡ ಇಂಗ್ಲೀಷ್ ನಿಘಂಟಿನಲ್ಲಿ ‘Masterly syilodminition superiority’ ಎಂದು ಹೇಳಲಾಗಿದೆ. ‘ಪ್ರಭುತ್ವ’ ಎನ್ನುವ ಪದದ ಅರ್ಥದಲ್ಲಿ ಅಧಿಕಾರದೊಂದಿಗೆ, ಅಂಕೆಯಲ್ಲಿಟ್ಟುಕೊಳ್ಳುವುದು ಎಂಬ ಅರ್ಥವೂ ಬರುತ್ತದೆ. ಡಾ.ಜಿ.ಎಸ್. ಶಿವರುದ್ರಪ್ಪನವರು ಪ್ರಭುತ್ವಕ್ಕೆ ಸಂವಾದಿಯಾಗಿ ‘Establishment’ ಎಂಬ ಆಂಗ್ಲ ಪದವನ್ನು ಬಳಸಿದ್ದಾರೆ. ಡಾ.ವಿ.ಲಕ್ಷ್ಮೀನಾರಾಯಣರು, ಡಾ.ಬಿ.ಆರ್.ಅಂಬೇಡ್ಕರ್ ಅವರ ರಾಜಕೀಯ ವಿಚಾರ ಧಾರೆಯನ್ನು ವಿವರಿಸುತ್ತಾ ಪ್ರಭುತ್ವಕ್ಕೆ ಸಂವಾದಿಯಾಗಿ ‘State’ ಎಂಬ ಆಂಗ್ಲ ಪದವನ್ನು ಬಳಸಿಕೊಂಡಿದ್ದಾರೆ. ಇದಲ್ಲದೆ ಪ್ರಭುತ್ವಕ್ಕೆ ಸ್ವಾಯತ್ವ (possession) ವೈಭವ, ಗೌರವ, ಹತೋಟಿ, ಮಾಲೀಕತನ ಎಂಬ ಅರ್ಥಗಳು ಹೊರಡುತ್ತವೆ.

ಹೀಗೆ ಪ್ರಭುತ್ವಕ್ಕೆ ಪದಕೋಶಗಳಲ್ಲಿ ಅನೇಕ ಅರ್ಥಗಳಿವೆ. ಪದಕೋಶದ ಅರ್ಥಗಳು ಸಾಮಾಜಿಕ ಚಾರಿತ್ರಿಕ ಸ್ವರೂಪ ಪಡೆದಿರುವುದಿಲ್ಲ. ಕೇವಲ ಶಬ್ಧಃ ಅರ್ಥವಾಗಿರುತ್ತದೆ. ಆದರೆ ಅರ್ಥ ರೂಪಗೊಂಡ ಬಗೆ ಮುಖ್ಯವಾದುದು. ಈ ಹಿನ್ನಲೆಯಲ್ಲಿ ಪ್ರಭುತ್ವವನ್ನು ಹೀಗೆ ಅರ್ಥೈಯಿಸಬಹುದು. ಸಂಪತ್ತನ್ನು ಕೇಂದ್ರೀಕರಿಸಿ, ಖಾಸಗಿ ಒಡೆತನಕ್ಕೆ ಒಳಪಡಿಸಿ, ಆಳುವ ವರ್ಗದ ಸರ್ವಾಧಿಕಾರವನ್ನು, ಪ್ರತಿನಿಧಿಸುವವರನ್ನು, ಪ್ರಭುಗಳೆಂದು ಹೇಳಬಹುದು. ಕಾಲದಿಂದ ಕಾಲಕ್ಕೆ ರಾಜ ವ್ಯವಸ್ಥೆ ಬಲಗೊಂಡಂತೆ ಪ್ರಭುತ್ವದ ಸ್ವರೂಪವೂ ಬದಲಾಗುತ್ತಾ ಬಂದಿದೆ. ಪ್ರಭುತ್ವದಿಂದ ಪ್ರಜಾಪ್ರಭುತ್ವದ ಸ್ವರೂಪವನ್ನು ಇತಿಹಾಸದ ಮೂಲಕ ಗುರುತಿಸಬಹುದು. ರಾಜಪ್ರಬುತ್ವ ಮೊದಲ್ಗೊಂಡು ಆಧುನಿಕ ಕಾಲದ ಪ್ರಜಾಪ್ರಭುತ್ವದ ಹರವಿನಲ್ಲಿ ರೂಪಗೊಂಡ ಸಮುದಾಯಗಳ ಬದುಕಿನ, ಸಂಸ್ಕೃತಿಯ ಮೂಲಕ ಪ್ರಭುತ್ವದ ವಿವಿಧ ಆಕೃತಿಗಳನ್ನು, ಆಯಾಮಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಹೀಗೆ ಗುರುತಿಸಿಕೊಳ್ಳುತ್ತಲೇ, ಒಟ್ಟು ಪ್ರಭುತ್ವದ ಸ್ವರೂಪ ಮತ್ತು ಅದರ ಸಾದಕ ಬಾದಕಗಳನ್ನು ಸಾಹಿತ್ಯಮುಖೇನ ನಿರ್ವಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**ಪ್ರಭುತ್ವದ ಉಗಮ ಮತ್ತು ವಿಕಾಸ**

ವರ್ತಮಾನದ ತವಕ, ತಲ್ಲಣಗಳು ಚರಿತ್ರೆಯನ್ನು ರೂಪಿಸುತ್ತವೆ. ನಮ್ಮ ಕಣ್ಣೆದುರಿಗೆ ಸಂಭವಿಸುವ ಸಾಂಸ್ಕೃತಿಕ ವಿದ್ಯಮಾನಗಳು ಒಂದು ದೃಷ್ಟಿಕೋನವನ್ನು ಹುಟ್ಟಿಸುತ್ತವೆ. ಪ್ರಭುತ್ವದ ಪರಿಕಲ್ಪನೆಯೂ ಈ ಭಾಗವಾಗಿಯೇ ವ್ಯಾಖ್ಯಾನಗೊಳ್ಳುತ್ತದೆ. ಮನುಷ್ಯನ ವಿಕಾಸದ ಹಂತಗಳಲ್ಲಿ ಪ್ರಭುತ್ವದ ಉಗಮವನ್ನು ಗುರುತಿಸುವುದು ತುಸು ಕಷ್ಟದ ಕೆಲಸ. ಆದರೆ ಖಾಸಗಿ ಒಡೆತನದ ಆರಂಭ ಪ್ರಭುತ್ವದ ಆರಂಭವೂ ಆಗುತ್ತದೆ. ಮನುಷ್ಯನ ಸಾಮಾಜಿಕ ಬದುಕು ಖಾಸಗಿಯಾಗಿ ಪರಿವರ್ತನೆಯಾಗುವ ಸಂದರ್ಭದಲ್ಲಿ ಪ್ರಭುತ್ವವು ಹಲವು ರೂಪಗಳಲ್ಲಿ ತನ್ನ ಗುರುತುಗಳನ್ನು ಬಲಗೊಳಿಸುತ್ತಲೇ ಬಂದಿದೆ. ಈ ಬಲದ ವಿರುದ್ಧ ಚಲನೆಗಳು ಹುಟ್ಟಿಕೊಂಡಿವೆ. ಮನುಕುಲ ಚರಿತ್ರೆಯಲ್ಲಿ ಪ್ರಭುತ್ವ ಮತ್ತು ವಿರುದ್ಧ ಚಲನೆಗಳು ಒಟ್ಟೊಟ್ಟಾಗಿಯೇ ಸಂಘರ್ಷ ಮಾಡುತ್ತಾ ಬಂದಿವೆ. ಈ ಸಂಘರ್ಷದ ಸಂಗತಿಗಳು ಸಾಹಿತ್ಯದ ಬದಲಾವಣೆಗೆ ಕಾರಣವಾಗುತ್ತದೆ. ಹೀಗಾಗಿ ಪ್ರಭುತ್ವದ ಉಗಮವನ್ನು ಚಾರಿತ್ರಿಕ ದೃಷ್ಟಿಕೋನದಿಂದ ವಿವೇಚಿಸಲಾಗಿದೆ. ಮನುಷ್ಯನ ವಿಕಾಸದ ಹಂತಗಳಿಗೆ ಲಕ್ಷಾನುಲಕ್ಷ ವರ್ಷಗಳ ಇತಿಹಾಸವೇ ಇದೆ. ಭೂಮಿಯ ಇತಿಹಾಸದೊಂದಿಗೆ, ಮಾನವನ ಇತಿಹಾಸವನ್ನು ಹೋಲಿಸಿ ನೋಡಿದರೆ, ಮಾನವನ ಇತಿಹಾಸ ತೀರ ಇತ್ತೀಚಿನದು. ಭೂಮಿಯೂ ಹುಟ್ಟಿ ಎಷ್ಟೋ ಶತಮಾನಗಳ ನಂತರ, ಮನುಷ್ಯ ಈ ಭೂಮಿಯ ಮೇಲೆ ಜನ್ಮ ತಾಳಿದನು. ನಂತರ ಮನುಷ್ಯನ ತಿಳುವಳಿಕೆ ಹೆಚ್ಚಾದಂತೆ, ಒಬ್ಬರ ಮೇಲೆ ಒಬ್ಬರು ಸವಾರಿ ಮಾಡುವ ಪ್ರವೃತ್ತಿಯು ಬೆಳೆಯುತ್ತಾ ಬಂದಿದೆ. ಮಂಗನಿಂದ ಮಾನವನ ರೂಪ ಪಡೆದಾಗ ಆಹಾರ ಬಹಳ ಮುಖ್ಯವಾಯಿತು. ಅದಕ್ಕಾಗಿ ಗೆಡ್ಡೆ, ಗೆಣಸುಗಳನ್ನು ಮುಖ್ಯ ಆಹಾರ ಪದರ್ಥಾಗಳನ್ನಾಗಿ ಮಾಡಿಕೊಂಡನು. "ಮೀನಿನ ಬಳಕೆ ಮತ್ತು ಬೆಂಕಿಯ ಬಳಕೆ ಇವೆರಡೂ ಬಹುಶಃ ಒಂದೇ ಕಾಲಘಟ್ಟದಲ್ಲಿ ಪ್ರಾರಂಭವಾಗಿರಬೇಕು. ಈ ಹೊಸ ಆಹಾರ ಪದ್ಧತಿಯ ಕಾರಣದಿಂದ ನದೀ ತೀರಗಳನ್ನು ಆರಿಸಿಕೊಂಡು ಭೂಮಿಯ ಮೇಲೆ ಹೆಚ್ಚಿನ ಭಾಗಗಳಲ್ಲಿ ಹರಡಿಕೊಳ್ಳುವುದು ಸಾಧ್ಯವಾಯಿತು. ಪುರಾತನ ಶಿಲಾಯುಗಕ್ಕೆ ಸೇರಿದವೆನ್ನಲಾದ ನಯವಿಲ್ಲದ ಆಯುಧಗಳು ಎಲ್ಲಾ ಖಂಡಗಳಲ್ಲೂ ಹರಡಿರುವುದನ್ನು ಗಮನಿಸಿದರೆ ಮಾನವರು ಸ್ಥಳದಿಂದ ಸ್ಥಳಕ್ಕೆ ಹೋಗುತ್ತಿದ್ದರೆನ್ನುವುದು ಸ್ಪಷ್ಟವಾಗುತ್ತದೆ"[1].

ಹೀಗೆ ಆರಂಭದಲ್ಲಿ ಮಾನವ ಮೀನನ್ನು ಆಹಾರವನ್ನಾಗಿ ಮಾಡಿಕೊಂಡು ಬೇಟೆಯಾಡುವುದನ್ನು ಅಭ್ಯಾಸ ಮಾಡಿಕೊಂಡನು. ಕಲ್ಲನ್ನು ಉಜ್ಜಿ ಬೆಂಕಿ ಮಾಡುವ ಕಲೆಯನ್ನು ಕರಗತ ಮಾಡಿಕೊಂಡನು. ಈ ಹೊಸ ಆಹಾರ ಪದ್ಧತಿಯೂ ಮಾನವನನ್ನು ಹವಗುಣದಿಂದಲೂ ಒಂದು ನಿರ್ದಿಷ್ಟ ಸ್ಥಳದಿಂದಲೂ ಸ್ವತಂತ್ರನನ್ನಾಗಿ ಮಾಡಿತು. ನದಿ ತೀರಗಳನ್ನು ಹುಡುಕಿಕೊಂಡು ಹೋಗುತ್ತಾ, ಜೀವನಾವಸ್ಥೆಯನ್ನು ಕಂಡುಕೊಂಡನು. ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತಾ, ಹೊಸ ಹೊಸತಾದುದನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ನಿರತನಾದನು. ಅವಿರತ ಕ್ರೀಯಾಶೀಲ ಒತ್ತಾಸೆಯನ್ನು ರೂಢಿಸಿಕೊಂಡನು. ಬೇಟೆಯಾಡಲು ಚೂಪಾದ ಕಲ್ಲುಗಳ ಆಯುಧಗಳನ್ನು ಬಳಸಿಕೊಳ್ಳುತ್ತಾನೆ. ನಂತರದ ದಿನಗಳಲ್ಲಿ ಮರದಿಂದ ಮಾಡಿದ ದೊಣ್ಣೆ ಆಯುಧ ಮತ್ತು ಈಟಿಗಳನ್ನು ಕಂಡುಹಿಡಿದಿರಬೇಕು. "ಕಾಡು ಪ್ರಾಣಿಗಳು ಮಾನವನ ನಿಯತವಾದ ಆಹಾರದ ಅಂಶಗಳಾದವು. ಮತ್ತು ಬೇಟೆಗಾರಿಕೆಯು ಸಾಮಾನ್ಯ ವೃತ್ತಿಗಳಲ್ಲೊಂದಾಯಿತು. ಬಿಲ್ಲು ಹೆದೆ ಹಾಗೂ ಬಾಣ ಅತ್ಯಂತ ವ್ಯವಸ್ಥಿತವಾದ ಸಲಕರಣೆ ಇದರ ಆವಿಷ್ಕರಣದ ಹಿಂದೆ ದೀರ್ಘಕಾಲದ ಸಂಗ್ರಹಿತ ಅನುಭವ ಹಾಗೂ ನಿಕ್ಷಿತ ಬುದ್ಧಿಶಕ್ತಿ ಇದ್ದವು. ಇದರ ಫಲವಾಗಿಯೇ ಮಾನವನಿಗೆ ಅದೇ ಕಾಲದಲ್ಲಿ ಅನೇಕ ಇತರ ಆವಿಷ್ಕರಣೆಗಳ ಪರಿಚಯವೂ ಆಯಿತು".[2] ಮಾನವ ನಾಗರೀಕತೆಯ ಕಡೆ ವಾಲತೊಡಗಿದನು. "ಈ ಆರಂಭಿಕ ಘಟ್ಟದಲ್ಲೂ ಜನರು ಹಳ್ಳಿಗಳಲ್ಲಿ ನೆಲಸತೊಡಗಿದುದ್ದನ್ನು ಜೀವನೋಪಾಯ ಸಾಧನಗಳಾದ ಮರದ ಪಾತ್ರೆ ಪರಟೆಗಳು ತೊಗಟೆ ನಾರಿನಿಂದ ಮಗ್ಗಗಳಿಲ್ಲದೆ ಕೈ ಬೆರಳುಗಳಿಂದಲೇ ನೇಯ್ದ ವಸ್ತುಗಳು, ತೊಗಟೆ ಅಥವಾ ಜೋಡಿನಿಂದ ಹೆಣೆದ ಬುಟ್ಟಿಗಳು ನಯ ಮಾಡಿದ (ನವ ಶಿಲಾಯುಗದ) ಶಿಲಾಯುಧಗಳು ಇವುಗಳ ಉತ್ಪಾದನೆಯ ಮೇಲೆ ಒಂದಿಷ್ಟು ಪ್ರಮಾಣದಲ್ಲಿ ಪ್ರಭುತ್ವ ಪಡೆದುದ್ದನ್ನು ನಾವು ಕಾಣುತ್ತೇವೆ."[3] ಬೆತ್ತಲಾಗಿ ತಿರುಗುತ್ತಿದ್ದವನು, ಮರದ ಆಯುಧಗಳನ್ನು ಕಂಡುಕೊಂಡಾಗ ಮರದ ತೊಗಟೆಯನ್ನೇ, ಬಟ್ಟೆಯನ್ನಾಗಿ ಮಾಡಿಕೊಂಡು ಬೆತ್ತಲೆ ದೇಹವನ್ನು ಮುಚ್ಚಿಕೊಂಡನು. ಒಂದು ಬದುಕನ್ನು ರಚನೆ ಮಾಡಿಕೊಂಡು, ಫಲವತ್ತಾದ ಭೂಮಿಯನ್ನು ಹುಡುಕಿಕೊಂಡು ಕೃಷಿ ಪದ್ಧತಿಯನ್ನು ಪ್ರಾರಂಭಿಸಿದನು. ಕೃಷಿ ಪದ್ಧತಿಯನ್ನು ರೂಢಿಸಿಕೊಂಡಿದ್ದರಿಂದ ಪಶುಪಾಲನೆ ಆರಂಭವಾಯಿತು. ಪಶುಪಾಲನೆಯಲ್ಲಿ ಹಾಲು ಮತ್ತು ಮಾಂಸ ಎರಡಕ್ಕೂ ಯೋಗ್ಯವಾದಂತಹ ಪಶುಗಳನ್ನು ಪಾಲನೆ ಮಾಡತೊಡಗಿದನು. ಕಾಡುಕೋಣ ಮತ್ತು ಎತ್ತುಗಳನ್ನು ಪಳಗಿಸಿಕೊಂಡು, ಫಲವತ್ತಾದ ಭೂಮಿಯ ಉಳುಮೆಗಾಗಿ ಬಳಕೆ ಮಾಡಿಕೊಂಡನು.

ಈ ವ್ಯವಸ್ಥೆ ಮಾನವ ಪಶುಪಾಲನ ಜೀವನಕ್ಕೆ ದಾರಿ ಮಾಡಿಕೊಟ್ಟಿತು. ಜೊತೆಗೆ ಉತ್ಪಾದನಾ ಸಾಮಗ್ರಿಯನ್ನು ಹೆಚ್ಚಿಸಿಕೊಳ್ಳತೊಡಗಿದನು. ಇದರಿಂದಾಗಿ 'ಪ್ರಭುತ್ವ' ಪರಿಕಲ್ಪನೆಯ ಬೀಜ ಮೊಳಕೆ ಹೊಡೆಯತೊಡಗಿತು. ನಂತರದ ದಿನಮಾನಗಳಲ್ಲಿ ಗಟ್ಟಿಯಾಗಿ ಸ್ಥಾಪಿಸುವ ಕಡೆ ಹೆಜ್ಜೆಗಳನ್ನು ಹಾಕತೊಡಗಿದನು. "ಪೂರ್ವ ಖಂಡದಲ್ಲಿ ಪಶುಪಾಲನೆ, ಹಾಲು ಮತ್ತು ಮಾಂಸದ ಬಳಕೆ ಇವುಗಳಿಂದ ಬೆಳವಣಿಗೆ ಪ್ರಾರಂಭವಾದರೆ, ಪಶ್ಚಿಮದಲ್ಲಿ ಆಹಾರ ಯೋಗ್ಯ ಸಸ್ಯಗಳನ್ನು ಬೆಳೆಯುವುದು. ಒಣಗಿದ ಇಟ್ಟಿಗೆಯನ್ನು ಉಪಯೋಗಿಸಿ ಮನೆ ಕಟ್ಟುವುದು ಮುಂತಾದವು ಬೆಳವಣಿಗೆಯ ಲಕ್ಷಣಗಳಾಗಿವೆ. ಪೂರ್ವ ಖಂಡದ ಜನರಿಗೆ ಈ ಅವಧಿಯಲ್ಲಿ ಸಸ್ಯಗಳನ್ನು ಬೆಳೆಯುವುದು ತಿಳಿದಿರಲಿಲ್ಲವೆಂದು ಕಾಣುತ್ತದೆ. ಈ ಹಂತದಲ್ಲಿ ನರಭಕ್ಷಣೆ ಕಡಿಮೆಯಾಗಿ ಮಂತ್ರಮಾಟಗಳ ಮೂಲಕ ಧಾರ್ಮಿಕತೆಯ ಪ್ರವೇಶವಾಗಿರಬೇಕು"[4] ಎನ್ನುವ ಸಿ. ವೀರಣ್ಣನವರ ಮಾತುಗಳಿಂದ ಧರ್ಮವೂ ಕೂಡ ಪ್ರಭುತ್ವದ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಲು ಪ್ರಾರಂಭಿಸಿತು ಎಂಬುದು ವೇದ್ಯವಾಗುತ್ತದೆ.

ಮಾನವನು ಕೃಷಿಯನ್ನು ಆರಂಭಿಸಿದ್ದರಿಂದ ಕೃಷಿಯಲ್ಲಿ ಮಹಿಳೆಯರ ಪಾತ್ರ ಮುಖ್ಯವಾಯಿತು. ಹೆಂಗಸರು ಮನೆ ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ, ಕೃಷಿಯ ಎಲ್ಲಾ ಆಗುಹೋಗುಗಳನ್ನು ನೋಡಿಕೊಂಡು ಒಂದೆಡೆ ಇರುತ್ತಿದ್ದಳು. ಗಂಡಸರು ಬಿಲ್ಲು ಬಾಣಗಳನ್ನು ಹಿಡಿದು ಬೇಟೆಯಾಡುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡು ಆಹಾರ ಹುಡುಕುವ ಕಾರ್ಯದಲ್ಲಿ ನಿರತರಾಗಿದ್ದರು. ಏಕೆಂದರೆ "ಧಾನ್ಯ ಬೆಳೆಯುವುದನ್ನು ಅವರು ತಮ್ಮ ಜಾನುವಾರುಗಳಿಗೆ ಮೇವು ಒದಗಿಸುವ ಅವಶ್ಯಕತೆಯ ಕಾರಣದಿಂದಾಗಿ ಪ್ರಾರಂಭಿಸಿದುದೆ, ಹೆಚ್ಚು ಸಂಭವವೆನ್ನಬಹುದು. ಅನಂತರವಷ್ಟೇ ಧಾನ್ಯವು ಮಾನವರಿಗೆ ಪುಷ್ಟಿದಾಯಕ ಆಹಾರವಾಯಿತು"[5]. ಈ ಕಾರಣಕ್ಕೋಸ್ಕರ ಗಂಡಸರು ಆಹಾರ ಹುಡುಕುತ್ತಿದ್ದರು. ಕೃಷಿಯಲ್ಲಿ ಹೆಂಗಸರ ಪಾತ್ರ ಬಹುಮುಖ್ಯವಾಯಿತು. ಕೆಲಸ ಕಾರ್ಯಗಳ ಮೇಲೆ ತಾರತಮ್ಯಗಳು ಹುಟ್ಟತೊಡಗಿದವು. ಹೆಣ್ಣು ಮತ್ತು ಗಂಡು ಕೃಷಿಯಲ್ಲಿ ತಮ್ಮದೇ ಆದ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಕೃಷಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾಶಸ್ತ್ಯ ಇರುವುದನ್ನು ಇಂದಿಗೂ ಕಾಣುತ್ತೇವೆ.

"ಭೂಮಿಯನ್ನು ಮೊದಲಿಗೆ ಅಗೆದು ಬೀಜ ಬಿತ್ತಿ ಕೃಷಿ ಮಾಡಿದ್ದು ಹೆಣ್ಣು. ಕೃಷಿಗೆ ಅವಳೇ ಮೊದಲಿಗಳಾಗಿದ್ದರಿಂದ ಗುಂಪಿನಲ್ಲಿ ಅವಳ ಮಹತ್ವ ಹೆಚ್ಚಿತು. ಕೃಷಿ ಅವಳ ಮೂಲಕವೇ ಮುಂದುವರೆಯಿತು. ಮಕ್ಕಳನ್ನು ಅವಳ ಮೂಲಕವೇ ಗುರುತಿಸುವ ಪರಿಪಾಠದಿಂದ ಮಾತೃಪ್ರಧಾನವಾದ ಸಮೂಹ ಬೆಳೆಯಿತು. ಅಂದರೆ ಸಮಾಜದ ಆರಂಭ ಕಾಲಗಳಲ್ಲಿ ಕಿರಾತವಸ್ಥೆ ಮತ್ತು ಅನಾಗರಿಕಾವಸ್ಥೆ ಎಲ್ಲ ಮಜಲುಗಳಲ್ಲಿ ಸ್ತ್ರೀಯರು ಸ್ವತಂತ್ರವಾದ ಸ್ಥಾನವನ್ನೇ ಅಲ್ಲ ಅತ್ಯಂತ ಗೌರವದ ಸ್ಥಾನವನ್ನು ಪಡೆದಿದ್ದರು. ಕೃಷಿಯ ಬೆಳವಣಿಗೆ ಮತ್ತು ಅದರ ಜೊತೆಗೆ ಪಶುಗಳ ಪಾಲನೆ ಪದ್ಧತಿಯಿಂದಾಗಿ ಅವುಗಳನ್ನು ನೋಡಿಕೊಳ್ಳಲು ಯುದ್ಧದಲ್ಲಿ ಸೆರೆಸಿಕ್ಕವರು ಉಪಯೋಗಕ್ಕೆ ಬಂದರು. ಅವರನ್ನು ಪಶುಗಳಂತೆಯೇ ಸಾಕಬಹುದಾಗಿತ್ತು. ಈ ಸಮೂಹಗಳೇ ಸಂಪತ್ತಾಗಿ ಬೆಳೆದು ಖಾಸಗಿ ಆಸ್ತಿ ಎನಿಸಿತು. ಆಸ್ತಿಯ ಬೆಳವಣಿಗೆ ಮಾತೃ ಪ್ರಧಾನ ಪದ್ಧತಿಯ ಬೇರುಗಳನ್ನು ಅಲುಗಾಡಿಸಿತು".[6] ದಿನದಿಂದ ದಿನಕ್ಕೆ ಮಾನವನ ಬೆಳವಣಿಗೆ ಬದಲಾವಣೆಯನ್ನು ಕಾಣತೊಡಗಿತು. ಜೀವನವನ್ನು ನಿಭಾಯಿಸುವುದು ಕಷ್ಟಕರವಾಯಿತು. ಆಗ ಗಂಡಸು ಕೃಷಿಯಲ್ಲಿ ಮಗ್ನನಾದನು. ಹೀಗೆ ಹೆಣ್ಣಿನ ಕೈಯಲ್ಲಿದ್ದ ಪಶುಪಾಲನೆ ಮತ್ತು ಕೃಷಿಯ ಉತ್ಪಾದನಾ ಸಾಧನಗಳು, ಗಂಡಸಿನ ಕೈಗೆ ವರ್ಗಾಯಿಸಲ್ಪಡುವುದರ ಮೂಲಕ ಸ್ತ್ರೀ ಗುಲಾಮಗಿರಿ ಪ್ರಾರಂಭವಾದಂತಿದೆ. ಹೆಣ್ಣು, ಗಂಡು ಎಂಬ ತಾರತಮ್ಯ ಹುಟ್ಟಿತು. "ಸಮೂಹದ ಸಂಪತ್ತಾದ ದನಕರುಗಳು ಮತ್ತು ಗುಲಾಮರು ಹೆಚ್ಚಿದಂತೆ ಹೆಣ್ಣಿಗಿಂತ ಗಂಡಿಗೆ ಹೆಚ್ಚು ಮುಖ್ಯವಾದ ಸ್ಥಾನ ದೊರೆಯಿತು. ಈ ಸಂಪತ್ತಿನ ಉತ್ತರಾಧಿಕಾರದ ಪಾರಂಪರಿಕ ಪದ್ಧತಿಯನ್ನು ಕಿತ್ತೊಗೆದು ಸ್ವಂತ ಮಕ್ಕಳ ಪರವಾಗಿ ಅದನ್ನು ಬದಲಿಸುವಂತೆ ಗಂಡಿಗೆ ಉತ್ತೇಜನ ನೀಡಿತು. ಹೀಗಾಗಿ ಸ್ತ್ರೀ ಸಂತತಿಯ ಮೂಲಕ ವಂಶನಿರ್ಧಾರ ಮಾಡುವುದನ್ನು ತಾಯಿಯಿಂದ ಉತ್ತರಾಧಿಕಾರ ಪಡೆದುಕೊಳ್ಳುವ ಹಕ್ಕನ್ನು ತೊಡೆದು ಹಾಕಿ, ಪುರುಷ ಸಂತತಿಯ ಮೂಲಕ ವಂಶ ನಿರ್ಧಾರ ಮತ್ತು ತಂದೆಯಿಂದ ಉತ್ತರಾಧಿಕಾರ ಪಡೆಯುವಿಕೆ ಇವೆರಡು ಸ್ಥಾಪಿತವಾಯಿತು. ಈ ಬದಲಾವಣೆ ಸಮೂಹ ವಿವಾಹವನ್ನು ಅಸಾಧ್ಯವಾಗಿಸಿ ಅದರ ಜಾಗದಲ್ಲಿ ಯುಗ್ಮ ವಿವಾಹವನ್ನು ಅಸ್ತಿತ್ವಕ್ಕೆ ತಂದಿತು. ಒಬ್ಬ ಗಂಡಸು ಒಬ್ಬ ಹೆಂಗಸಿನ ಜೊತೆ ವಾಸಮಾಡುತ್ತ ಅದೇ ಸಂದರ್ಭದಲ್ಲಿ ಬಹುಪತ್ನಿತ್ವವನ್ನು ಪಾಲಿಸುವುದು ಮುಂದುವರೆಯಿತು. ಆದರೆ ಹೆಂಗಸಿಗೆ ಮಾತ್ರ ದಾಂಪತ್ಯ ಜೀವನವನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕಾದ ಸ್ಥಿತಿ ಒದಗಿತು. ಸಾಮಾಜಿಕ ಬೆಳವಣಿಗೆಯಲ್ಲಿ ಮಾತೃ ಅಧಿಕಾರದ ಪತನವೇ ಸ್ತ್ರೀ ಸಮುದಾಯದ ಮೊದಲ ಐತಿಹಾಸಿಕ ಪರಾಭವವೆನ್ನಬಹುದು. ಮನೆಯಲ್ಲೂ ಪುರುಷನೇ ಆಡಳಿತ ಸೂತ್ರಗಳನ್ನು ತನ್ನ ಕೈಗೆ ತೆಗೆದುಕೊಂಡನು. ಹೆಣ್ಣು ದಾಸಿಯಂತೆ ಕೆಳದರ್ಜೆಗೆ ಇಳಿದಳು. ಇದೂ ಅಲ್ಲದೇ ಹೆಂಡತಿಯ ಪತಿನಿಷ್ಠೆಯನ್ನು ಕಾಪಾಡಲು ಅಂದರೆ ಮಕ್ಕಳ ತಂದೆ ಅವಳ ಪತಿಯೇ ಎಂಬುದನ್ನು ಖಚಿತಪಡಿಸಲು ಅವಳನ್ನು ಗಂಡಸಿನ ಪೂರ್ಣ ಅಧಿಪತ್ಯದಲ್ಲಿ ಇರಿಸಲಾಯಿತು. ಗಂಡು ಹೆಣ್ಣನ್ನು ಕೊಂದರೂ ಅದು ಅವನ ಹಕ್ಕೆನಿಸಿತು".[7] ಫಲವಾಗಿ ಒಟ್ಟು ಕುಟುಂಬದ ಒಡೆತನವು ಗಂಡಸರ ಕಡೆ ವಾಲಿತು. ಸಾಮೂಹಿಕ ಉತ್ಪಾದನಗಳ ಹಿನ್ನಲೆಯಲ್ಲಿ 'ಪ್ರಭುತ್ವ'ವೂ ಮೊಟ್ಟಮೊದಲಿಗೆ ಉದಯವಾಯಿತು. 'ಖಾಸಗಿ ಆಸ್ತಿ' ಮತ್ತು ಕುಟುಂಬದ ಉಗಮ ಪುರುಷ ಪ್ರಧಾನತೆಯನ್ನು ಮತ್ತು ಪುರುಷ ಪ್ರಭುತ್ವಕ್ಕೆ ಇಂಬು ನೀಡಿದಂತಿದೆ.

ಮಾನವನ ತಿಳುವಳಿಕೆ ಹೆಚ್ಚಿದಂತೆ ಅವನ ವರ್ತನೆಯಲ್ಲಿ ಸಾಕಷ್ಟು ಬದಲಾವಣೆಗಳು ಬೆಳವಣಿಗೆಗಳು ಕಂಡುಬಂದವು. 'ಕುಲ', 'ಕುಟುಂಬ' ಎಂಬ ಖಾಸಗಿ ಜೀವನವನ್ನು ಆರಂಭಿಸಿದನು. 'ಖಾಸಗಿ ಆಸ್ತಿ'ಯನ್ನು ವೃದ್ಧಿಪಡಿಸಿಕೊಳ್ಳತೊಡಗಿದನು. ಆಗ ಸಮಾಜದಲ್ಲಿ ಅನೇಕ ಬದಲಾವಣೆಗಳು ಉಂಟಾದವು. ಕುಟುಂಬದ ಪೂರ್ವದಲ್ಲಿ "ಗಂಡಸರು ಮತ್ತು ಹೆಂಗಸರ ಸಣ್ಣ ಗುಂಪು ನಿಸರ್ಗದ ವಿರುದ್ಧ ಒಟ್ಟಾಗಿ ಹೋರಾಡುತ್ತಾ ಒಟ್ಟಾಗಿ ದುಡಿಯುತ್ತಾ, ಒಟ್ಟಾಗಿ ವಂಶಾಭಿವೃದ್ಧಿ ಮಾಡುತ್ತಾ ಬದುಕುತ್ತಿತ್ತು. ಆರ್ಥಿಕತೆಯಂತೆ ಲೈಂಗಿಕತೆಯಲ್ಲೂ ಆದಿ ಆರ್ಯ ಅತ್ಯಂತ ಒರಟಾಗಿಯೂ ಅರ್ಧ ಪಶುವಾಗಿಯೂ ಇದ್ದ. ಅವನು ನಿಸರ್ಗದ ವಿರುದ್ಧ ಹೋರಾಡುತ್ತಾ ಆ ಮೂಲಕ ಬೆಳೆಯುತ್ತ ನಿಸರ್ಗದ ಮೇಲೆ ಪ್ರಭುತ್ವ ಸಾಧಿಸಲು ಪ್ರಯತ್ನಿಸಿದರು. ಆ ಹಂತದಲ್ಲಿ ಗಂಡು ಹೆಣ್ಣಿನ ಮಧ್ಯೆ ಲೈಂಗಿಕ ಸಂಬಂಧಗಳ ಹೊರತು ತಾಯಿ, ಮಗ, ತಂದೆ, ಮಗಳು, ಅಣ್ಣ, ತಂಗಿ ಎನ್ನುವ ಈ ಸಂಬಂಧಗಳನ್ನು ಆತನು ಗುರುತಿಸಿರಲಿಲ್ಲ"[8]. ಆನಂತರದಲ್ಲಿ ಕುಲಗಳನ್ನು ಮಾಡಿಕೊಂಡು 'ತಾಯಿ ಕುಲ', 'ತಂದೆಯ ಕುಲ' ಎಂದು ಗುರುತಿಸಿಕೊಳ್ಳ ತೊಡಗಿದರು. ಕುಲದ ನಂತರದಲ್ಲಿ 'ಕುಟುಂಬ'ವೆಂಬ ಘಟಕವನ್ನು ಮಾಡಿಕೊಂಡನು. ಈ ಕುಟುಂಬದ ನಿರ್ವಹಣೆಗೆ ಒಬ್ಬ ಯಜಮಾನ ಬೇಕಾಯಿತು. ಮೊಟ್ಟಮೊದಲು ಯಜಮಾನನ ಸ್ಥಾನವನ್ನು ಮಹಿಳೆ ವಹಿಸಿಕೊಂಡಳು. ಈ ಸಂದರ್ಭದಲ್ಲಿ ಮಾತೃ ಪ್ರಧಾನವಾದ ಕುಟುಂಬಗಳು ಬೆಳಕಿಗೆ ಬಂದವು. ಯಜಮಾನತ್ವದ ಹಿನ್ನಲೆಯಲ್ಲಿ ಪ್ರಪ್ರಥಮ ಬಾರಿಗೆ ಮಹಿಳೆ ಆ ಸ್ಥಾನವನ್ನು ಅಲಂಕರಿಸಿದಳು.

ವೇದಗಳ ಕಾಲದಲ್ಲಿ "ಕುಟುಂಬಗಳ ಸಮೂಹಕ್ಕೆ 'ಗ್ರಾಮ'ವೆಂದು ಕರೆದರು. ಹಲವಾರು ಗ್ರಾಮಗಳಿಂದ ಕೂಡಿದ ಗುಂಪಿಗೆ 'ವಿಶ್' ಎಂದು ಕರೆದರು. 'ವಿಶ್'ಗಿಂತಲೂ ದೊಡ್ಡದಾದ ಸಮೂಹಕ್ಕೆ 'ಜನ' ಎಂದು ಕರೆದರು. ಇದೇ ಸಂದರ್ಭದಲ್ಲಿ ಅನೇಕ ಚಿಕ್ಕ ಚಿಕ್ಕ ಬುಡಕಟ್ಟು ಗುಂಪುಗಳನ್ನು ರಚನೆ ಮಾಡಿಕೊಳ್ಳಲಾಗಿತ್ತು. ಪ್ರತಿಯೊಂದು ಬುಡಕಟ್ಟು ಪ್ರದೇಶಕ್ಕೆ ಒಬ್ಬ ನಾಯಕ ಇರುತ್ತಿದ್ದನು. ಈ ಬುಡಕಟ್ಟುಗಳು ಸದಾ ಯುದ್ಧದಲ್ಲಿ ನಿರತವಾಗಿರುತ್ತಿದ್ದವು. ಈ ನಡುವೆಯೂ ವೈದಿಕ ಕಾಲದಲ್ಲಿ ಅನೇಕ ರಾಜ ಪ್ರಭುತ್ವವಿಲ್ಲದ ಪ್ರದೇಶಗಳಿದ್ದವು. ಅವುಗಳನ್ನು ಗಣಗಳೆಂದು ಋಗ್ವೇದದಲ್ಲಿ ಉಲ್ಲೇಖಿಸಲಾಗಿದೆ. ಮತ್ತು ಅವುಗಳ ನಾಯಕರನ್ನು ಗಣಪತಿ ಅಥವಾ ಜೇಷ್ಠ(ಹಿರಿಯ) ಎಂದು ಕರೆಯುತ್ತಿದ್ದರು"[9]. ಗಣವೆಂದರೆ ಸಮುದಾಯ ಗುಂಪು, ಪಂಗಡ ಎಂಬ ಅರ್ಥದಲ್ಲಿ ಹೇಳಲಾಗುತ್ತದೆ. ಈ ಗಣದಲ್ಲಿ ನೂರಾರು ಕುಟುಂಬಗಳು ಇರುತ್ತಿದ್ದವು. ಇಲ್ಲವೇ ನೂರು ಜನರಿರುತ್ತಿದ್ದರು. ಗಣಗಳ ಬಗ್ಗೆ ಹೆಚ್ಚಾಗಿ ಋಗ್ವೇದದಲ್ಲಿ ಉಲ್ಲೇಖವಾಗಿದೆ. ಗಣಗಳು ಹೆಚ್ಚು ಹೆಚ್ಚಾಗಿ ಹೋರಾಟದ ಬದುಕಿನಲ್ಲಿ ತೊಡಗಿಕೊಂಡಿರುತ್ತಿದ್ದವು. "ಋಗ್ವೇದದಲ್ಲಿ ದೇವ ಗಣಗಳ ಇಂತಹ ಹೋರಾಟದ ವಿವರಗಳು ಹೇರಳವಾಗಿವೆ. ಮಹಾಭಾರತದ ಆದಿಪರ್ವ ಮತ್ತು ನಮ್ಮ ಅನೇಕ ಪುರಾಣಗಳು ಆದಿತಿ, ವಸು, ರುದ್ರ, ದಸ್ಯು, ದಿತಿ, ಮೊದಲಾದ 18 ಗಣಗಳ ಹೋರಾಟಗಳ ವರ್ಣನೆಗಳಿಂದ ತುಂಬಿಕೊಂಡಿದೆ. ಈ ಹೋರಾಟವನ್ನು ಒಳಗೊಂಡ ಅನೇಕ ಪ್ರಾಚೀನ ಗಣಗಳು ತಮ್ಮ ಮಾತೃವಿನ ಹೆಸರಿನಿಂದ ಕರೆಯಲ್ಪಡುತ್ತಿದ್ದವು. ಆದರೆ ಋಗ್ವೇದದ ಕಾಲದಲ್ಲಿ ನಡೆಯುತ್ತದ್ದ ಯುದ್ಧಗಳಲ್ಲಿ ಪಿತೃಪ್ರಧಾನವಾದ ಗಣಗಳೇ ಒಳಗೊಂಡಿದ್ದವು. ಅವುಗಳಲ್ಲಿ ಸುದಾಸ ಮತ್ತು ದಾವೋದಾಸ ಮುಖ್ಯವಾಗಿದ್ದವು. ಈ ಸಮಯಕ್ಕಾಗಲೇ ಮಾತೃ ಪ್ರಧಾನ ವ್ಯವಸ್ಥೆ ಕೊನೆಗೊಂಡು ವರ್ಗಬೇಧಗಳುಳ್ಳ ಸ್ವಂತ ಆಸ್ತಿಯ ಮೇಲೆ ರಚಿತವಾದ ಪಿತೃಪ್ರಧಾನ ವ್ಯವಸ್ಥೆ ನಿಧಾನವಾಗಿ ನೆಲೆಗೊಳ್ಳಲು ಪ್ರಾರಂಭಿಸಿತ್ತು"[10] ಹೀಗೆ ವರ್ಗಬೇಧವುಳ್ಳ ಪಿತೃಪ್ರಧಾನ ವ್ಯವಸ್ಥೆಯ ಅಧಿಕಾರ ಬಂದಿದ್ದರಿಂದ ಹೆಣ್ಣು ಅಧಿಕಾರವಂಚಿತಳಾದಳು. ಖಾಸಗಿ ಆಸ್ತಿಯ ಪ್ರಭುತ್ವದ ಅಧಿಕಾರ, ಗಂಡಿನಲ್ಲಿ ಕೇಂದ್ರಿಕೃತವಾಯಿತು. ಅನೇಕ ಗಣಗಳಾಗಿ ಪರಿವರ್ತನೆಗೊಂಡಾಗ ಆ ಗಣಗಳಲ್ಲಿ ಸಮರ್ಥನಾದ, ಬುದ್ಧಿವಂತನಾದ ಒಬ್ಬನನ್ನು ಗಣದ

ಮುಖ್ಯಸ್ಥನನ್ನಾಗಿ ಆರಿಸುತ್ತಿದ್ದರು. ಹೀಗೆ ಆರಿಸಲ್ಪಟ್ಟ ವ್ಯಕ್ತಿಗೆ 'ಬ್ರಹ್ಮಣಸ್ಪತಿ', 'ಬೃಹಸ್ಪತಿ' ಅಥವಾ 'ಗಣಪತಿ' ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ವಿವಿಧ ಪ್ರದೇಶದಲ್ಲಿ ಬೇರೆ ಬೇರೆ ಗಣಗಳು ವಾಸವಾಗಿರುತ್ತಿದ್ದವು. ಗಣಗಳ ವ್ಯವಸ್ಥೆ ಮುಂದೆ ಗಣತಂತ್ರವಾಗಿ ಪರಿವರ್ತನೆಯಾಯಿತು. ಗಣತಂತ್ರ ವ್ಯವಸ್ಥೆ ಎಂದರೆ ವಿವಿಧ 'ಜನ'ಗಳ, ವಿವಿಧ ಸಮುದಾಯಗಳ, ವಿವಿಧ ಗಣಗಳ ನಾಯಕರು ಮುಖ್ಯಸ್ಥರು ಸೇರಿದ ಗಣಗಳ 'ಒಕ್ಕೂಟ'. ಈ ಒಕ್ಕೂಟಕ್ಕೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸುತ್ತಿದ್ದರು. ಇದೇ ವ್ಯವಸ್ಥೆ ಮುಂದಿನ ದಿನಗಳಲ್ಲಿ ಗಣ ಪರಿಷತ್ತು ಆಯಿತು. ಈ 'ಗಣ ತಂತ್ರ' ಅಥವಾ ಗಣಪರಿಷತ್ತಿನ ಕಾರ್ಯತಂತ್ರಗಳು ಹೆಚ್ಚುಕಾಲ ಉಳಿದುಕೊಂಡು ಬಂದವು. ಇದು ಮುಂದೆ ಬುದ್ಧನ ಕಾಲದಲ್ಲಿ ಗಣರಾಜ್ಯಗಳಾಗಿ ಪರಿವರ್ತನೆಗೊಂಡು ಸಾಕಷ್ಟು ಬೆಳವಣಿಗೆಯನ್ನು ಕಂಡುಕೊಂಡಿತು. "ಆದಿಕಾಲದ ಬುಡಕಟ್ಟು ಸಮಾಜಗಳಲ್ಲೂ ಒಂದಿಲ್ಲೊಂದು ಬಗೆಯ ಆಡಳಿತ ಕ್ರಮವಿತ್ತು. ಕೆಲವು ಕಡೆ ದೊರೆಗಳು ಇದ್ದರು. ಆದರೆ ಇಲ್ಲಿ ಶೋಷಣೆಯಿರಲಿಲ್ಲ. ಬುಡಕಟ್ಟು ಸಮಾಜ ಲಕ್ಷಣವೇ ಸಮಾನತೆ, ಸಹಕಾರ, ಹಾಗಾಗಿ ವರ್ಗ, ಜಾತಿ ಆಧಾರದ ಸುಲಿಗೆ ಅಲ್ಲಿ ಇದ್ದಿರಲಾರದು. ಆದರೆ ಕಾಲಾಂತರದಲ್ಲಿ ವರ್ಗ, ಜಾತಿಗಳು ಹುಟ್ಟಿದಾಗ ಕಂಡು ಬಂದ ಶೋಷಣೆಗೆ ಅಡಿಪಾಯವನ್ನು ಆದಿಮ ಬುಡಕಟ್ಟು ದೊರೆತನಗಳು ಹಾಕಿರುವ ಸಾಧ್ಯತೆಯಿದೆ. ಚರಿತ್ರಕಾರರು ಗುರುತಿಸುವ ಭಾರತದ ಮೊಟ್ಟಮೊದಲ ರಾಜಮನೆತನಗಳಲ್ಲಿ ಇವಕ್ಕೆ ಉದಾಹರಿಸಬಹುದು. ಬುದ್ಧ ಇಂಥ ಬುಡಕಟ್ಟು ರಾಜಮನೆತನಕ್ಕೆ ಸೇರಿದವನೆಂಬ ವಿಚಾರವಿದೆ"[11].

ಗಣರಾಜ್ಯಗಳ ಬಗ್ಗೆ ಇತಿಹಾಸಕಾರರು ಅನೇಕ ಅಭಿಪ್ರಾಯಗಳನ್ನು ಸೂಚಿಸುತ್ತಾರೆ. "ಕೆ.ಪಿ.ಜಯಸ್ವಾಲರ ಪ್ರಕಾರ ಭಾರತದಲ್ಲಿ ಗಣರಾಜ್ಯ ಪದ್ಧತಿಯ ಸರಕಾರ ಚಕ್ರಾಧಿಪತ್ಯದ ನಂತರ ಬಂದಿತ್ತು".[12] ಎಂದು ಹೇಳಿದ್ದಾರೆ. "ಪ್ರೋ. ರೈಯಿಸ್ ಡೆವಿಡ್ಸರು ತಮ್ಮ 'ಬುದ್ಧಭಾರತ'ದಲ್ಲಿ ಬುದ್ಧನ ಮತ್ತು ನೆರೆಯ ಪ್ರದೇಶಗಳಲ್ಲಿ ಗಣರಾಜ್ಯ ಪದ್ಧತಿಯ ಸರಕಾರ ಇತ್ತೆಂದು ಹೇಳುತ್ತಾರೆ."[13]. ಮತ್ತು "ಪಾಣಿನಿಯ ಪ್ರಾಚೀನ ಭಾರತದಲ್ಲಿಯ ಗಣರಾಜ್ಯಗಳ ವಿಷಯವಾಗಿ ಬೆಲೆಯುಳ್ಳ ಸಾಕಷ್ಟು ಮಾಹಿತಿಯನ್ನು ಕೊಡುತ್ತಾನೆ. ಪ್ರತ್ಯಕ್ಷದಲ್ಲಿ ಹಿಂದಿನ ವ್ಯಾಕರಣಕಾರನು. ಉದಾಹರಣೆ ಕೊಡುವಷ್ಟರ ಮಟ್ಟಿಗೆ ಗಣರಾಜ್ಯಗಳು ಮಹತ್ವವನ್ನು ಪಡೆದಿರಬೇಕು. ಪಾಣಿನಿಯು ಗಣರಾಜ್ಯಗಳನ್ನು ಸಂಘ ಹೀಗೆ ನಮೂದಿಸುತ್ತಾನೆ. ಯೌದೇಯ ಪಾರ್ಶ್ವ, ಜಾನಕಿ, ಬ್ರಹ್ಮಗುಪ್ತ ದಂಡಿಕೆ"[14]. ಎಂಬ ಮುಂತಾದ ಗಣರಾಜ್ಯಗಳು ಇದ್ದವು ಎಂದು ಹೇಳುತ್ತಾನೆ. ಈ ಗಣರಾಜ್ಯದ ವ್ಯವಸ್ಥೆಯಲ್ಲಿ ಅರಸನನ್ನು ಆರಿಸುತ್ತಿದ್ದರು. ಆ ಮೂಲಕ ಅರಸನಿಗೆ ಅಧಿಕಾರವನ್ನು ಯಜಮಾನತ್ವವನ್ನು ನೀಡುತ್ತಿದ್ದರು. ಆದರೆ ಇಲ್ಲಿ ದಬ್ಬಾಳಿಕೆ, ದೌರ್ಜನ್ಯ, ಶೋಷಣೆ ಕಡಿಮೆ ಇರುತ್ತಿತ್ತು. "ಕೌಟಿಲ್ಯನ ಅರ್ಥಶಾಸ್ತ್ರವೂ ಅನೇಕ ಗಣರಾಜ್ಯಗಳನ್ನು ಉಲ್ಲೇಖಿಸುತ್ತದೆ. ಅದರಲ್ಲಿ ಲಿಚ್ಛವಿಗಳು, ವೃಜ್ಜಿಗಳು, ಮಲ್ಲಕರು, ಮುದ್ರಕರು, ಕುರುಕರು, ಪಾಂಚಾಲಿಗಳು, ಕಾಂಬೋಜದವರು, ಸೌರಾಷ್ಟ್ರೀಯರು, ಮುಂತಾದವರು ಇದ್ದಾರೆ"[15]ಎಂದು ತಿಳಿಸುತ್ತದೆ. ಗಣಗಳನಾಯಕರು ಅಧಿಕಾರವನ್ನು ವಹಿಸಿದ್ದರು. ಶೋಷಣೆರಹಿತವಾದ ಅಧಿಕಾರವನ್ನು ನಡೆಸುತ್ತಿದ್ದರು. ಅಲೆಗ್ಸಾಂಡರನ ದಾಳಿಯ ಕಾಲದಲ್ಲಿಯೂ ಅನೇಕ ಗಣಗಳು ಅಸ್ತಿತ್ವದಲ್ಲಿದ್ದವು ಎಂದು ತಿಳಿಯುತ್ತದೆ. ಈ ಸಂದರ್ಭದಲ್ಲಿ ಅನೇಕ ಗಣರಾಜ್ಯಗಳ ಅಧಿಕಾರವನ್ನು ಕಾಣುತ್ತೇವೆ. ಗಣಗಳೆಲ್ಲವೂ ಸ್ವತಂತ್ರವಾಗಿ ತಮ್ಮ ಆರ್ಥಿಕತೆ ಮತ್ತು ರಾಜಕೀಯ ಇಚ್ಛಾ ಶಕ್ತಿಯನ್ನು ಬೆಳೆಸಿಕೊಂಡವು. ಇದು ಪ್ರಬಲವಾಗುತ್ತಾ ರಾಜ ಪ್ರಭುತ್ವಕ್ಕೆ ಒಂದು ಸ್ವರೂಪವನ್ನು ಹಾಕಿಕೊಂಡಿತು. ಗುಪ್ತರ ಕಾಲದ ಪೂರ್ವದಲ್ಲಿಯೂ ಗಣರಾಜ್ಯಗಳ ಆಡಳಿತವನ್ನು ಕಾಣುತ್ತೇವೆ. ಪುಷ್ಯ ಮಿತ್ರ, ಪದ್ಮಮಿತ್ರಗಳೆಂಬ ಗಣರಾಜ್ಯಗಳು ಇದ್ದವು. ಗುಪ್ತರ ಉದಯವಾಗುತ್ತಿದ್ದಂತೆ ಈ ಗಣರಾಜ್ಯಗಳು ಮಾಯವಾದವು. ಹೀಗೆ ಆದಿಮಾ ಕಾಲದಲ್ಲಿ ಗಣಗಳು ಪ್ರಭುತ್ವದ ಆಯಾಮಗಳನ್ನು ಪಡೆದುಕೊಂಡವು. ಗಣರಾಜ್ಯಗಳಲ್ಲಿಯೂ ಕೂಡ ಅಧಿಕಾರಕ್ಕೋಸ್ಕರ ಒಳಸಂಚಿನ ಪಿತೂರಿ ನಡೆಯುತ್ತಿತ್ತು. ಒಂದು ವೇಳೆ ಚರ್ಚಿಸಬೇಕಾಗಿ ಬಂದಾಗ ಪರಸ್ಪರ ವೈರಿಗಳಾಗುತ್ತಿದ್ದರು. "ಕೆಲವು ಮನೆತನಗಳಲ್ಲಿ ಮುಖಂಡತ್ವವು ಅನುವಂಶಿಕವಾಯಿತು. ಕ್ರಿ.ಶ. 8ನೆಯ ಶತಮಾನದಲ್ಲಿ ಆ ಮುಖಂಡರು ಮಹಾರಾಜರ ಮತ್ತು ಮಹಾಸೇನಾಧಿಪತಿಗಳ ಉಪಾದಿಗಳನ್ನು ಬಳಸುತ್ತಿದ್ದರು. ಗಣರಾಜ್ಯಗಳಿಗಿಂತ ಚಕ್ರಾಧಿಪತ್ಯಗಳು ಜನರ ಸುರಕ್ಷಿತತೆಗೆ ಹೆಚ್ಚು ಅನುಕೂಲಕರ ಎಂಬ ಅಭಿಪ್ರಾಯವು ತಲೆದೋರಿತು. ಇಂಥ ಪರಿಸ್ಥಿತಿಯಲ್ಲಿ ಗಣರಾಜ್ಯಗಳು ಮಾಯವಾಗಿ ಚಕ್ರಾಧಿಪತ್ಯಗಳು (ಒಂಟಿಚಿಡಿಛಿಧಿ) ಸರ್ವೇ ಸಾಮಾನ್ಯವಾದವು"[16]

ಯಜಮಾನತ್ವವನ್ನುವಹಿಸಿಕೊಂಡ ಗಣದ ಮುಖ್ಯಸ್ಥರಾದವರು ತುಂಬಾ ಜನಪ್ರಿಯತೆಯನ್ನು ಗಳಿಸುತ್ತಿದ್ದರು. ಯಾವುದೇ ಅಪ್ರಿಯ ಕೆಲಸಗಳನ್ನು ಮಾಡುತ್ತಿರಲಿಲ್ಲ. ಯಾವಾಗಲೂ ಹೋರಾಟ ಮಾಡಲಿಕ್ಕೆ ಸಿದ್ಧವಾಗಿರುತ್ತಿದ್ದರು. ಸೈನಿಕ ಪದ್ಧತಿಯೂ ರೂಢಿಯಲ್ಲಿತ್ತು. ಅಂದಿನ "ಗಣರಾಜ್ಯದ ಮುಖ್ಯಸ್ಥನನ್ನು ಅದರ ಕೇವಲ ಸೇವಕನೆಂದು ಪರಿಗಣಿಸಲಾಗಿತ್ತು"17. ಮೊದಮೊದಲು ಅಧಿಕಾರ ರಹಿತ ಯಜಮಾನತ್ವವನ್ನು ಕಾಣುತ್ತೇವೆ. ಯಜಮಾನತ್ವವೆಂದರೆ ಕೇವಲ ನೆಪ ಮಾತ್ರವಾಗಿತ್ತು. ನಂತರದ ದಿನಗಳಲ್ಲಿ ಪ್ರಭುತ್ವದ ಯಜಮಾನತ್ವ ತನ್ನ ಸ್ವರೂಪವನ್ನೇ ಬದಲಾಯಿಸಿಕೊಂಡಿತು. "ಖಾಸಗಿ ಆಸ್ತಿಯ ಹಿನ್ನೆಲೆಯಲ್ಲಿ ವರ್ಗ, ವರ್ಣ, ಜಾತಿ ಪದ್ಧತಿಗಳು ಬೆಳೆದು ನಿಂತವು. ಈ ಆಸ್ತಿಯ ರಕ್ಷಣೆಗೋಸ್ಕರ **'ಪ್ರಭುತ್ವ'**ವು ಉದಯವಾಯಿತು. ಆಸ್ತಿವಂತರು ಅಧಿಕಾರವನ್ನು ಸ್ಥಾಪಿಸಿಕೊಂಡು ಪ್ರಬಲರಾದರು. ಎಷ್ಟೋ ಕಡೆ ರಾಜ ಪ್ರಭುತ್ವ ಪ್ರಧಾನ ಲಕ್ಷಣವಾಯಿತು. ಪ್ರಾಚೀನದಲ್ಲಿ ಪ್ರಭುತ್ವವು ಶ್ರೀಮಂತರನ್ನು ರಕ್ಷಿಸುವುದಕ್ಕೋಸ್ಕರವೇ ಜನಿಸಿದೆ. ಗುಲಾಮಗಿರಿಯನ್ನು ಕಾನೂನು ಬದ್ಧಗೊಳಿಸಿದೆ. ಖಾಸಗಿ ಒಡೆತನವನ್ನು ರಕ್ಷಿಸುವ ಶಾಸನಗಳನ್ನು ಮಾಡುತ್ತಾ ಬಂದಿದೆ"[18]. ಎಂದು ಖಾಸಗಿ ಆಸ್ತಿಯ ವಾರಸುದಾರರು ಪ್ರಬಲವಾಗುತ್ತಾ ಬಂದರೋ ಅಂದಿನಿಂದಲೇ ಪ್ರಭುತ್ವದ ಯಜಮಾನತ್ವದ ಸ್ವರೂಪ ಬದಲಾಯಿತು. ಆಸ್ತಿದಾರರು ಪ್ರಬಲವಾದಂತೆ ಉಳಿಗಮಾನ್ಯ ಪದ್ಧತಿಯೂ ಪ್ರಬಲವಾಯಿತು. ಉಳಿಗಮಾನ್ಯ ಪದ್ಧತಿಯ ಸಂದರ್ಭದಲ್ಲಿ ಪ್ರಭುತ್ವದ ಯಜಮಾನತ್ವ ನಿಕೃಷ್ಟ ಸ್ಥಿತಿಯನ್ನು ಮುಟ್ಟಿತು. ಜನಸಾಮಾನ್ಯರನ್ನು ಗುಲಾಮರನ್ನಾಗಿ ಮಾಡಿಕೊಂಡು ದುಡಿಸಿಕೊಳ್ಳುತ್ತಿತ್ತು. ಶೋಷಣೆ, ದಬ್ಬಾಳಿಕೆ, ಅನ್ಯಾಯ ಮುಂತಾದವುಗಳು ಪರಾಕಾಷ್ಠೆಯ ಮುಗಿಲನ್ನು ಮುಟ್ಟಿದ್ದವು.

ಉಳಿಗಮಾನ್ಯ ಪದ್ಧತಿಯ ಬೆನ್ನಲ್ಲೆ ನಮ್ಮ ರಾಜಮನೆತನಗಳ ಚರಿತ್ರೆ ಆರಂಭವಾಯಿತು. ಉಳಿಗಮಾನ್ಯ ದೊರೆಗಳಂತೆ ರಾಜರುಗಳು ಮುಂದುವರೆದು ಶೋಷಣೆ, ಹಿಂಸೆ, ಅತ್ಯಾಚಾರ, ದಬ್ಬಾಳಿಕೆ, ಸುಲಿಗೆ ಕ್ರೌರ್ಯ, ಭ್ರಷ್ಟತೆ ಮುಂದುವರೆಸಿದರು. ಸಮಾಜದೊಳಗೆ "ಪ್ರಭುತ್ವದ ಯಜಮಾನಿಕೆ ಎಂಬುದು ತುಂಬ ಮಹತ್ವದ ಪಾತ್ರವಾಡುತ್ತದೆ. ಅದು ಯುದ್ಧಗಳನ್ನು ಹುಟ್ಟುಹಾಕುತ್ತದೆ. ನಾಡ ಗಡಿಗಳನ್ನು ನಿರ್ದಿಷ್ಟಗೊಳಿಸಿ ಆ ಪ್ರದೇಶದಲ್ಲಿ ತನ್ನ ಆಡಳಿತ ಕ್ರಮ ರೂಪಿಸಲು ಪ್ರಯತ್ನಿಸಿದೆ. ತನ್ನ ಪ್ರತಿಷ್ಠೆಯನ್ನು ಮೆರೆಯುತ್ತದೆ. ಒಡೆತನ ಸುಲಿಗೆಗಳು ನಿರಂತರವಾಗಿರುವಂತೆ ವ್ಯವಸ್ಥೆಗೊಳಿಸುತ್ತದೆ. ಕಾಯಿದೆ ಕಾನೂನುಗಳನ್ನು ತನ್ನ ಪರವಾಗಿರುವಂತೆ ರಚಿಸಿಕೊಳ್ಳುತ್ತದೆ. ಕಲಾವಿದರು, ವಿದ್ವಾಂಸರನ್ನು ತತ್ವಜ್ಞಾನಿಗಳನ್ನು ಸಾಕುತ್ತದೆ. ವ್ಯವಸ್ಥೆಯನ್ನು ನಿಯಂತ್ರಿಸುವ ಶಕ್ತಿಯಂತೆ ತೋರುತ್ತದೆ"[19]. ಪ್ರಾಚೀನ ಕಾಲದಿಂದಲೂ ಪ್ರಭುತ್ವದ ಪರಿಕಲ್ಪನೆಯನ್ನು ರಾಜತ್ವದ ಅರಸುಮನೆತನದ ಆಳುಮನೆತನದ ಒಂದು ಭಾಗವಾಗಿಯೇ

ನೋಡಿಕೊಂಡು ಬಂದಿದ್ದೇವೆ. ಈ ಸಂದರ್ಭದಲ್ಲಿ ಧಾರ್ಮಿಕ ಪ್ರಭುತ್ವ, ಲಿಂಗ ಪ್ರಭುತ್ವ, ವರ್ಗ ಪ್ರಭುತ್ವಗಳು ಯುದ್ಧ ಪ್ರಭುತ್ವ, ಜಾತಿ ಪ್ರಭುತ್ವಗಳೂ ಕೂಡ ಪ್ರಬಲವಾಗಿದ್ದವು. ಇಡೀ ನಮ್ಮ ಕನ್ನಡ ಸಾಹಿತ್ಯವನ್ನು ಈ ಪ್ರಭುತ್ವಗಳನ್ನು ಹೋಗಳುವ ಕೂಸಾಯಿತು. ಪ್ರಭುತ್ವದ ಯಜಮಾನತ್ವದೊಂದಿಗೆ ಧಾರ್ಮಿಕ ಪ್ರಭುತ್ವವೂ ಸೇರಿಕೊಂಡಿತು. ಸಾಹಿತ್ಯವೂ ಆರಂಭ ಕಾಲದಿಂದ ಹಿಡಿದು 11ನೇ ಶತಮಾನದ ಕೊನೆಯ ಅವಧಿಯವರೆಗೂ ಪ್ರಭುತ್ವವನ್ನು ಕೇಂದ್ರಿಕರಿಸಿತ್ತು. ನಯಸೇನ, ಅಂಡಯ್ಯನಂತಹವರು ಪ್ರಭುತ್ವಕ್ಕೆ ತಕ್ಕಮಟಿಗೆ ಪ್ರತಿರೋಧವನ್ನು ಹೊಡ್ಡುತ್ತಲೇ ಬಂದರು. ನಂತರ ಬಂದ ವಚನ ಸಾಹಿತ್ಯದ ಶರಣರು ಇಡೀ ಪ್ರಭುತ್ವದ ವ್ಯವಸ್ಥೆಯನ್ನು ವಿರೋಧಿಸುವ, ಪ್ರತಿಭಟಿಸುವ, ಧಿಕ್ಕರಿಸುವ ವಾತವರಣವನ್ನು ಸೃಷ್ಟಿ ಮಾಡಿದರು. ಅಂದಿನ ರಾಜಸತ್ತೆ ಮತಸತ್ತೆಗಳು ಸಮಾಜವನ್ನು ನಿಯಂತ್ರಿಸುವ ಶಕ್ತಿಯನ್ನು ಪಡೆದುಕೊಂಡಿದ್ದವು. ರಾಜಸತ್ತೆಯ ಪೋಷಣೆಗಾಗಿ ಯುದ್ಧದಲ್ಲಿ ತೊಡಗಿರುತ್ತಿದ್ದವು. ಸುಂಕವನ್ನು ವಸೂಲಿ ಮಾಡುತ್ತಿದ್ದವು. ರಾಜಸತ್ತೆ ಮತ್ತು ಧರ್ಮಸತ್ತೆಗಳು ಮಾಡಬಾರದ ಆಚರಣೆಗಳನ್ನು ಮಾಡುತ್ತಿದ್ದವು. ಅಲ್ಲದೆ ಜನಸಾಮಾನ್ಯರ ನಡುವೆಯೇ ವೈರುತ್ವಗಳನ್ನು ಸೃಷ್ಟಿಸಿ ಮೇಲು, ಕೀಳು, ಬಡವ ಬಲ್ಲಿದ ಎಂಬ ಕಂದಕವನ್ನು ಉಂಟುಮಾಡುತ್ತಿದ್ದವು. ಸ್ತ್ರೀ ಪುರುಷರೆಂಬ ಲಿಂಗಭೇದ ಭಾವನೆಗಳನ್ನು ಹುಟ್ಟುಹಾಕಿ ಬೆಳಸತೊಡಗಿದವು.

ಹೀಗೆ ಒಂದು ಇನ್ನೊಂದನ್ನು ಶೋಷಣೆ ಮಾಡುವ ಮೂಲಕ ಅದರದೇ ಆದ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವ ಕೆಲಸವನ್ನು ಮಾಡಿದವು. ಪ್ರಭುತ್ವ ಅಧಿಕಾರದ ಬಂಡೆದ್ದ ಬಸವಣ್ಣ ಸಮಾಜದ ಸಮತೋಲನೆಗಾಗಿ ಹೋರಾಡಿ ಹೊಸ ಯುಗವನ್ನು ಆರಂಭಿಸಿದರು. ಪ್ರಭುತ್ವದ ಅಬ್ಬರಕ್ಕೆ ಕೊಡಲಿ ಪೆಟ್ಟನ್ನು ನೀಡಿದರು. ವಚನಯುಗ ಭೇದ ಭಾವವಿಲ್ಲದ, ತಾರತಮ್ಯತೆ ಇಲ್ಲದ ಸಮಾನತೆಗಾಗಿ ಹೋರಾಡಿತು. ಹಾಗೆಯೇ ಪ್ರಭುತ್ವವನ್ನು ವಿರೋಧಿಸುತ್ತಾ ಹೊಸದೊಂದು ವಾತಾವರಣವನ್ನು ಸೃಷ್ಟಿಸಲು ಅನುವುಮಾಡಿಕೊಟ್ಟಿತು.

**ಪ್ರಭುತ್ವದ ಸ್ವರೂಪ**

ಪ್ರಭುತ್ವ ಶೋಷಣಾ ಸ್ವರೂಪಿಯಾದುದು. ಅಪವಾದಗಳು ಇರಬಹುದು. ಅಧಿಕಾರ, ಆಳ್ವಿಕೆ, ನಿಯಂತ್ರಣ ಇವೇ ಅದರ ಸ್ವರೂಪ. "ಪ್ರಭುತ್ವವನ್ನು ಯಾವ ರೀತಿಯಲ್ಲಿ ನಿರ್ವಚಿಸಿದರೂ ಅದು ತನ್ನ ಗುರಿಯನ್ನು ನೆರವೇರಿಸಿಕೊಳ್ಳುವುದು. ಆಡಳಿತ ವ್ಯವಸ್ಥೆ ಅಥವಾ ಸರ್ಕಾರದ ಮೂಲಕವೆ. ಆದರೆ ಸರ್ಕಾರ ಪ್ರಭುತ್ವವಲ್ಲ. ಪ್ರಭುತ್ವ ಸರ್ಕಾರಕ್ಕಿಂತಲೂ ಅಮೂರ್ತವಾದ ವ್ಯವಸ್ಥೆ. ಉದಾಹರಣೆ ಮಧ್ಯಯುಗದಲ್ಲಿ ಹಲವು ರಾಜ ಮನೆತನಗಳ ಆಳ್ವಿಕೆ ಬರುತ್ತಿತ್ತು. ಆದರೆ ಬ್ರಾಹ್ಮಣ, ಕ್ಷತ್ರಿಯರ ಮುಂದಾಳತ್ವದ ಪ್ರಭುತ್ವದ ವ್ಯವಸ್ಥೆ ಇದರಿಂದ ಬದಲಾಗಲಿಲ್ಲ"[20]. ಇದರೊಟ್ಟಿಗೆ ಭಾಷೆ, ಲಿಂಗ, ವರ್ಗ, ಜಾತಿ, ಎನ್ನುವಂತಹ ಹಲವು ಮುಖಗಳಿವೆ. ಇವುಗಳನ್ನು ತನ್ನ ಅಸ್ತಿತ್ವದ ಉಳುವಿಗಾಗಿ ಬಳಸಿಕೊಳ್ಳುತ್ತದೆ. ಹಿಂಸೆಯ ಮೂಲಕ ಅಧಿಕಾರ ಮಾರ್ಗ ಹಿಡಿಯಲು ಪ್ರಯತ್ನಿಸುತ್ತದೆ. ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಭುತ್ವದ ಪ್ರಭಾವ ಇದ್ದೇ ಇರುತ್ತದೆ. ಸಾಹಿತ್ಯವನ್ನು ಮುಖ್ಯವಾಗಿಟ್ಟುಕೊಂಡು ಪ್ರಭುತ್ವದ ಕಲ್ಪನೆಯನ್ನು ಕಂಡುಕೊಂಡಾಗ ರಾಜಸತ್ತೆ, ಧರ್ಮಸತ್ತೆ, ಲಿಂಗ, ವರ್ಗ, ಜಾತಿ, ಯುದ್ಧ, ಹಿಂಸೆ ಮುಂತಾದವುಗಳೆಲ್ಲ ಪ್ರಭುತ್ವದ ಸ್ವರೂಪವನ್ನು ನಿರ್ಧರಿಸುವ ಆಯಾಮಗಳಾಗಿ ಮುಖ್ಯವಾಗುತ್ತವೆ. ರಾಜಸತ್ತೆಯ ಪ್ರಭುತ್ವದಲ್ಲಿ ರಾಜನೇ ಅಂತಿಮ. ಅವನನ್ನೇ ಪ್ರತ್ಯಕ್ಷ ದೇವರೆಂದು ಪರಿಭಾವಿಸಲಾಗುತ್ತದೆ. ಈ ರೀತಿಯ ಪರಿಕಲ್ಪನೆಗಳಲ್ಲಿ ರಾಜ್ಯದ ಒಡೆಯನಾದ ರಾಜನು ರಾಜ್ಯದ ನಿಯಮವನ್ನು ತನಗೆ ಬೇಕಾದಂತೆ ರೂಪಿಸುತ್ತಾನೆ. ಇದಕ್ಕೆ ಧರ್ಮಸತ್ತೆ ಪ್ರೋತ್ಸಹವನ್ನು ನೀಡುತ್ತದೆ. ಇಂತಹ ನೆಲೆಯೊಳಗೆ ಕನ್ನಡ ಸಾಹಿತ್ಯ ಬೆಳೆದು ನಿಂತಿದೆ.

**ಪ್ರಭುತ್ವದ ನಿರ್ವಚನ**

ಮಾನವನ ಹುಟ್ಟಿನ ಮೂಲದಲ್ಲಿ ಹಿಡಿತ ಸಾಧಿಸುವ, ಯಜಮಾನನಾಗುವ ಹಂಬಲ ಇರಲಿಲ್ಲ. ಈ ಸಂದರ್ಭದಲ್ಲಿ 'ಪ್ರಭುತ್ವಕ್ಕೆ' ಆಕಾರವೇ ಇರಲಿಲ್ಲ. ಒಂದು ನಿರ್ಧಿಷ್ಟ ನೆಲೆಯನ್ನು ಪಡೆದುಕೊಂಡು ಅಲೆಮಾರಿತನವನ್ನು ಬಿಟ್ಟು, ಒಂದೆಡೆ ಸ್ಥಿರವಾಗಿ ನಿಲ್ಲತೊಡಗಿದ ಮನುಷ್ಯಲೋಕ ಹಲವು ಅವಕಾಶ ಅನುಕೂಲಗಳನ್ನು ಕಲ್ಪಸಿಕೊಂಡಿತು. ಪಶುಪಾಲನೆ, ಕೃಷಿ ಮುಂತಾದ ಆವಿಷ್ಕಾರಗಳ ಮೂಲಕ ಮನುಷ್ಯ ಸಮಾಜದಲ್ಲಿ ಅನೇಕ ಸ್ಥಿತ್ಯಂತರಗಳು ಆಗಿವೆ. ಖಾಸಗಿ ಆಸ್ತಿಯ ಉಗಮದೊಂದಿಗೆ ಜನ ಸಮುದಾಯಗಳ ಸಾಮಾಜಿಕ ಬದುಕು ಕುಟುಂಬದಂತಹ ಘಟಕವನ್ನು ಗಟ್ಟಿಗೊಳಿಸಿತು. ಏಕ ಪತ್ನಿ ಪದ್ಧತಿಯ ಮೂಲಕ ಖಾಸಗಿ ಆಸ್ತಿ ಮತ್ತು ಕುಟುಂಬದ ಸ್ವರೂಪ ಪುರುಷ ಪ್ರಧಾನ ಸಂಸ್ಕೃತಿಗೆ ಹಾದಿಮಾಡಿಕೊಟ್ಟಿತು. ಖಾಸಗಿ ಆಸ್ತಿಯ ಪರಿಕಲ್ಪನೆ, ಸಾಮಾಜಿಕ ತಡೆಗೋಡೆಗಳನ್ನು ಮನುಷ್ಯ ಮನುಷ್ಯರ ಮಧ್ಯ ಹುಟ್ಟುಹಾಕಿತು. ಯಜಮಾನ, ಆಳು, ಪತಿ, ಪತ್ನಿ ಮುಂತಾದ ಸಂಬಂಧಗಳು ಸಾಮಾಜಿಕ ಮತ್ತು ಕೌಟುಂಬಿಕ ನೆಲೆಯಲ್ಲಿ ಅಸಮಾನತೆಯ ಕಂದಕವನ್ನು ಮೂಡಿಸಿತು. ಉತ್ಪಾದನಾ ಸಂಬಂಧಗಳೇ ಈ ಎಲ್ಲಾ ಬದಲಾವಣೆಗೆ ಕಾರಣ. ಈ "ಖಾಸಗಿ ಆಸ್ತಿಯ ಆಧಾರದಲ್ಲಿ ವರ್ಗ, ವರ್ಣ, ಜಾತಿ ಪದ್ಧತಿ ಬೆಲೆದಾಗ ಆಸ್ತಿಯನ್ನು ರಕ್ಷಿಸುವುದಕ್ಕಾಗಿಯೇ ಪ್ರಭುತ್ವದ ಉದಯವಾಯಿತು"[21]. ಹೀಗೆ ಉದಯವಾದ ಪ್ರಭುತ್ವ ಕ್ರಮೇಣ ಸಮಾಜದ ಎಲ್ಲಾ ಸ್ತರದಲ್ಲೂ ಚಾಚಿಕೊಂಡಿತು. ಬಲಿಷ್ಠರ ಹಿತಾಸಕ್ತಿಗಳೆಲ್ಲ ಪ್ರಭುತ್ವದ ಹುಟ್ಟಿಗೆ ಕಾರಣವಾದವು. ಯಾವಾಗ ಉತ್ಪಾದನೆ ಸಂಬಂಧಗಳು ಬಲಿಷ್ಠರ ಕೈಯಲ್ಲಿ ಕೇಂದ್ರಿಕೃತವಾದವೋ ಆವಾಗಿನಿಂದ ಪ್ರಭುತ್ವವು ಪ್ರಬಲವಾಗಲು ಕಾರಣವಾಯಿತು. ಪ್ರಭುತ್ವ ಪ್ರಬಲವಾದಾಗ ಸಮಾಜವನ್ನು ತನ್ನ ಅನುಕೂಲಕ್ಕೆ ತಕ್ಕ ಹಾಗೆ ಒಗ್ಗಿಸಿಕೊಳ್ಳಲು ಪ್ರಯತ್ನಿಸಿತು. ಇದಕ್ಕೆ ತನ್ನ ಬಲಪ್ರಯೋಗದ ಸಾಧನೆಗಳಾದ ಸೈನ್ಯ ಕಾನೂನುಗಳು ಮತ್ತು ಪೋಲೀಸ್ ಪದ್ಧತಿಗಳನ್ನು ಬಳಸಿಕೊಂಡಿತು. "ಯಾವ ಸಮಾಜದಲ್ಲಿ ಪ್ರಭುತ್ವವೆಂಬುದು ಏರ್ಪಟ್ಟಿರಲಿಲ್ಲವೋ ಅಂತಹ ಸಂದರ್ಭದಲ್ಲಿ ಸಮಾಜವನ್ನು ಒಂದು ಬಿಂದುವಿನಲ್ಲಿ ಕೇಂದ್ರಿಕರಿಸುವ ಕೆಲಸವನ್ನು ಸಂಸ್ಕೃತಿಯೂ ನೆರವೇರಿಸುತ್ತಿತ್ತು"[22]. ಇದರ ಪ್ರಸರಣದ ಕೆಲಸವನ್ನು ಮೌಖಿಕ ಪರಂಪರೆ ಮಾಡುತ್ತಿತ್ತು. ಬಲಾಢ್ಯರು ಬದುಕುವ ಅವಕಾಶಗಳನ್ನು ಮೌಲ್ಯಗಳೆಂದು ಕರೆದು ಅವುಗಳನ್ನೇ ಸಾಮಾನ್ಯ ಜನರೆಲ್ಲ ಭಯ ಭಕ್ತಿಯಿಂದ ಸ್ವೀಕರಿಸಿ, ರಕ್ಷಿಸುವ ವ್ಯವಸ್ಥೆಯನ್ನು ಸಂಸ್ಕೃತಿ ಮತ್ತು ಧರ್ಮದ ಹೆಸರಿನಲ್ಲಿ ಮಾಡಲಾಯಿತು. ಅವುಗಳನ್ನು ಸಾರ್ವಜನಿಕವಾಗಿ ತಿಳಿಯಪಡಿಸಲಾಗುತ್ತಿತ್ತು. ಹೀಗೆ ಸಮಾಜದಲ್ಲಿ ಪ್ರಭುತ್ವ ಗಟ್ಟಿಗೊಳ್ಳುವುದರ ಮೂಲಕ ಸಾಂಸ್ಕೃತಿಕ ನಿಯಂತ್ರಣದ ಬಿಂದುವಾಗಿ ರಾಜಪ್ರಭುತ್ವ, ಧರ್ಮಪ್ರಭುತ್ವ ಮಾರ್ಪಟ್ಟಿತು. ಆದರೆ ಇದು ಬಹುಕಾಲ ಉಳಿಯುವಂತದ್ದಲ್ಲ. ಸಮೂಹ ಜೀವನದ ಸಮಾಜ ಒಡೆದು ಹೋಗಿ ವೃತ್ತಿ ವಿಭಜನೆಯಿಂದ ಅನೇಕ ಗುಂಪುಗಳಾಗಿ ಮಾರ್ಪಟ್ಟವು. ಈ ಗುಂಪುಗಳೆಲ್ಲ ಅನೇಕ ಬಗೆಯ ನಿಯಂತ್ರಕ ಕೇಂದ್ರ ಬಿಂದುಗಳು (ರಾಜ, ಧರ್ಮ, ಲಿಂಗ, ಭಾಷೆ) ಅಸ್ತಿತ್ವಕ್ಕೆ ಬಂದವು. ಎಲ್ಲವೂ ಒಂದಕ್ಕೊಂದು ಪೂರಕವಾಗಿ ಸಮಾಜವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದ ಚರಿತ್ರೆಯನ್ನು ಮೂಲದಿಂದಲೂ ಕಾಣುತ್ತೇವೆ. ಜನ ಸಾಮಾನ್ಯರ ಜನ ಜೀವನದಲ್ಲಿ ಆರಂಭವಾದ ಪ್ರಭುತ್ವ ಒಂದು ಕ್ಷೇತ್ರಕ್ಕೆ ಸೀಮಿತವಾಗಿರಲಿಲ್ಲ. ರಾಜ ಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೆ ಪ್ರಭುತ್ವದ ಸ್ವರೂಪ ಅಮೂರ್ತವಾಗಿದೆ. ಪ್ರಭು

ಸಂಹಿತೆ ಮತ್ತು ಧರ್ಮಸಂಹಿತೆಗಳು ಪ್ರಭುತ್ವ ನಿರ್ವಚನವನ್ನು ಮಾಡುತ್ತವೆ. ರಾಜಪ್ರಭುತ್ವ, ಧರ್ಮಪ್ರಭುತ್ವ, ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ರೂಪಿಸಿವೆ. ಬಲಿಷ್ಠ ಮೂಲದಿಂದ ಹೋರಾಡುವ ಪ್ರಭುತ್ವದ ಕೇಂದ್ರ ಮನುಷ್ಯ ಸ್ವಾರ್ಥದಲ್ಲಡಗಿದೆ. ಸ್ವಾರ್ಥಕೇಂದ್ರಿತ ಪ್ರಭುತ್ವ ತನ್ನ ರಕ್ಷಣೆಗಾಗಿ ಧರ್ಮವನ್ನು ಮುಂದಿಟ್ಟುಕೊಂಡು ಕರ್ಮ ಸಿದ್ಧಾಂತವನ್ನು, ರಾಜನನ್ನು ಮುಂದಿಟ್ಟುಕೊಂಡು ದಮನಕಾರಕ ನೆಲೆಗಳನ್ನು ಹುಟ್ಟುಹಾಕಿತು.

ಕನ್ನಡ ಸಾಹಿತ್ಯ ಸಂದರ್ಭವನ್ನು ಮುಖ್ಯವಾಗಿಟ್ಟುಕೊಂಡು ಪ್ರಭುತ್ವದ ಬಗ್ಗೆ ಸುದೀರ್ಘವಾದ ಚರ್ಚೆ ವ್ಯಾಖ್ಯಾನಗಳು ನಡೆದಿವೆ. ಆಧುನಿಕ ಶಿಕ್ಷಣದ ಮೂಲಕ ಲಭ್ಯವಾದ ಜ್ಞಾನದಿಂದ ಈ ತರಹದ ಚರ್ಚೆಗಳು ನಡೆದಿವೆ. ಇದಕ್ಕೆ ಭಿನ್ನವಾದ ರೀತಿಯಲ್ಲಿ ಸಾಂಪ್ರದಾಯಿಕ ವ್ಯಾಖ್ಯಾನಗಳು ಇಲ್ಲವೆಂದಲ್ಲ. ಎಚ್.ಎಸ್.ಶಿವಪ್ರಕಾಶರು ಪ್ರಭುತ್ವ ಎನ್ನುವುದು ಆಳುವ ವರ್ಗದಿಂದ ಇತರ ವರ್ಗಗಳನ್ನು ತುಳಿಯುವ ಅಸ್ತ್ರ. ಪ್ರಭುತ್ವವನ್ನು ಯಾವ ರೀತಿಯಲ್ಲಿ ನಿರ್ವಚಿಸಿದರೂ ಅದು ತನ್ನ ಗುರಿಯನ್ನು ನೆರವೇರಿಸಿಕೊಳ್ಳುವುದು. ಆಡಳಿತ ವ್ಯವಸ್ಥೆ ಅಥವಾ ಸರ್ಕಾರದ ಮೂಲಕ. ಆದರೆ ಸರ್ಕಾರ ಪ್ರಭುತ್ವವಲ್ಲ. ಪ್ರಭುತ್ವ ಸರ್ಕರಕ್ಕಿಂತಲೂ ಅಮೂರ್ತವಾದ ವ್ಯವಸ್ಥೆ ಎನ್ನುವುದು, ಪ್ರಜಾಪ್ರಭುತ್ವದ ನೆಲೆಯಲ್ಲಿ, ಕಾಣಿಸುವ ಪ್ರಭುತ್ವ ನಿಜವಾದ ಪ್ರಭುತ್ವವಾಗಿರದೆ, ಅದನ್ನು ನಿಯಂತ್ರಿಸುವ ಸಮಾಜದಲ್ಲಿ ಪಟ್ಟಭದ್ರ ಸಾಮಾಜಿಕ ಹಾಗೂ ಆರ್ಥಿಕ ಶಕ್ತಿಯಾಗಿರುತ್ತದೆ ಎಂಬುದನ್ನು ಹಲವಾರು ನಿದರ್ಶನಗಳ ಮೂಲಕ ನೋಡಬಹುದು. ಆಕಾರ, ರೂಪರಹಿತವಾದ ಪ್ರಭುತ್ವ ನಿರಂತರವಾಗಿ ದಮನಕಾರಕ ನೀತಿಯನ್ನು ಪ್ರಧಾನವಾಗಿಟ್ಟುಕೊಂಡಿರುತ್ತಾರೆ. ಸಮಾಜದಲ್ಲಿ ಬೇರೆ ಬೇರೆ ದೃಷ್ಟಿಕೋನಗಳನ್ನು ಸಮನ್ವಯಗೊಳಿಸುವುದರ ಮೂಲಕ, ಪ್ರಭುತ್ವದ ಸ್ವರೂಪವನ್ನು ಗ್ರಹಿಸಬಹುದು ಅಥವಾ ಆಳುವ ವರ್ಗಗಳನ್ನು ಮುಖ್ಯವಾಗಿಟ್ಟುಕೊಂಡು ವ್ಯಾಖ್ಯಾನಿಸಬಹುದು. ಸಮಾಜದಲ್ಲಿ ಒಂದು ವ್ಯವಸ್ಥೆ ಸ್ಥಿತಿಸ್ಥಾಪಕವಾಗಿರುವುದಿಲ್ಲ. ಅದು ಕಾಲಕಾಲಕ್ಕೆ ಬದಲಾವಣೆಯನ್ನು ಪಡೆದುಕೊಳ್ಳುತ್ತಲೇ ಇರುತ್ತದೆ. ಕರ್ನಾಟಕದಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆಗೆ ಬಂದಿವೆ ಮತ್ತು ಹೋಗಿವೆ. ಅಧಿಕಾರಕ್ಕೆ ಬಂದ ರಾಜಮನೆತನಗಳು ಅನೇಕ ಬದಲಾವಣೆಯನ್ನು ಮಾಡುತ್ತಿದ್ದವು. ಆದರೆ ಬ್ರಾಹ್ಮಣ, ಕ್ಷತ್ರೀಯರ ಮುಂದಾಳುತನದ ಪ್ರಭುತ್ವ, ಧರ್ಮ ಮತ್ತು ಆಡಳಿತ ಅಂಗಗಳು ಮಾತ್ರ ಬದಲಾಗುತ್ತಿರಲಿಲ್ಲ. ಹೀಗೆ ಬಂದು ಹೋದ ರಾಜಮನೆತನಗಳು ಜನಹಿತದ ಕೆಲಸ ಮಾಡುವ ಸಲುವಾಗಿ ಧಾರ್ಮಿಕ ಮತ್ತು ಸಾಮಜಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದವು. ಅದರ ಮುಂದುವರಿಕೆಯಾಗಿಯೇ ಪ್ರಜಾಪ್ರಭುತ್ವದ ಸರ್ಕಾರಗಳ ಜಾತಿ, ಲಿಂಗ, ಭಾಷೆ ವರ್ಗಧಾರಿತವಾಗಿ ತಮ್ಮ ತಮ್ಮ ಅಧಿಕಾರಾವಧಿಯಲ್ಲಿ ಮಾಡುವ ಕಾರ್ಯಕ್ರಮಗಳ ಬಗ್ಗೆ ಹೇಳಿಕೊಳ್ಳುತ್ತವೆ. ಆದರೆ ಈ ಎಲ್ಲದರ ಹಿಂದೆ ಅಡಗಿ ಕುಳಿತಂತಹ ಪ್ರಭುತ್ವದ ಸ್ವರೂಪ ಮಾತ್ರ ಬದಲಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಪ್ರಭುತ್ವ ಶೋಷಣೆಯ ಹಾದಿಯನ್ನು ಹಿಡಿದಿದೆ. ಇಂತಹ ಪ್ರಭುತ್ವದ ಕೈಗೆ ಜನಸಾಮಾನ್ಯರ ಬದುಕು ಸಿಕ್ಕು ಬಳಲುತ್ತಿದೆ. ಪ್ರಾಚೀನ ಸಾಹಿತ್ಯವನ್ನು ರಚನೆ ಮಾಡಿದ ಕವಿಗಳ ಬದುಕು ಬರಹ ಕೂಡ ಧರ್ಮ ಪ್ರಭುತ್ವ ಮತ್ತು ರಾಜಪ್ರಭುತ್ವದ ಮೆಚ್ಚುಗೆ ಪಡೆಯುವ ಸಂತೃಪ್ತಿಗೊಳಿಸುವ ಸಲುವಾಗಿಯೇ ದುಡಿದಿದೆ. ಹೀಗೆ ದುಡಿಸಿಕೊಂಡ ಪ್ರಭುತ್ವ ರಾಜ ಮತ್ತು ಧಾರ್ಮಿಕ ನಾಯಕತ್ವದ ಆಕೃತಿಗಳಲ್ಲಿ ಚರಿತ್ರೆಯ ಪದರುಗಳಿವೆ.

ಆರ್.ವಿ.ಭಂಡಾರಿಯವರು ಪ್ರಭುತ್ವ ಎಂದರೆ 'ಸ್ಟೇಟ್' ಎನ್ನುವುದೇ ನಿಚ್ಚಳವಾದ ಅರ್ಥ ಎಂದಿರುವರು. ಸ್ಟೇಟ್ ಎಂದಾಗ ಅದರ ಕೈಯಲ್ಲಿ ಸೈನ್ಯಶಕ್ತಿ, ಪೋಲೀಸ್ ಶಕ್ತಿ, ನ್ಯಾಯ ಅಥವಾ ಕಾಯ್ದೆ, ಕಾನೂನಿನ ಶಕ್ತಿ ಹೀಗೆ ಒಟ್ಟಾರೆಯಾಗಿ ಸಂಪತ್ತನ್ನು ನಿಯಂತ್ರಣದಲ್ಲಿಡುವ ಶಕ್ತಿಯಾಗಿ ವ್ಯಕ್ತವಾಗುವುದರ ಕುರಿತು ಒತ್ತು ನೀಡಿರುವರು. ವರ್ಗಾಧಾರಿತ ಗ್ರಹಿಕೆಯಿಂದ ಈ ರೀತಿಯ ವ್ಯಾಖ್ಯಾನಗಳು ಹುಟ್ಟಿಕೊಂಡಿವೆ. ಸಂಪತ್ತಿನ ಸಂಗ್ರಹದ ಬಲಾಬಲದ ಮೇಲಿಂದ ಪ್ರಭುತ್ವದ ಸಾಮರ್ಥ್ಯ ಅಡಗಿರುತ್ತದೆ.

ಪ್ರಭುತ್ವವನ್ನು ಕೇಂದ್ರಬಿಂದುವಾಗಿಟ್ಟುಕೊಂಡು ವಿ. ಚಂದ್ರಶೇಖರ್ ನಂಗಲಿಯವರು, 'ಪ್ರಭುತ್ವವೆಂದರೆ ಎರಡು ಪ್ರತಿಷ್ಠಿತ ಶಕ್ತಿಗಳ ಮೇಳ' ಎನ್ನುವರು. ಜಾತಿ ಮತ್ತು ವರ್ಗ ಎಂಬುವುಗಳೆ ಪ್ರತಿಷ್ಠಿತ ಶಕ್ತಿಗಳಾಗಿರುತ್ತವೆ. ರಾಜ ಮನೆತನಗಳ ಕಾಲದಲ್ಲಿ ತೋಳ್ಬಲಕ್ಕೆ ಹೆಸರಾದ ಕ್ಷಾತ್ರ ಸಮುದಾಯದವರು ಒಂದು ಪ್ರಭುತ್ವವಾದರೆ, ಬುದ್ಧಿ ಬಲಕ್ಕೆ ಹೆಸರಾದ ವಿಪ್ರಸಮುದಾಯದವರು ಮತ್ತೊಂದು ಪ್ರಭುತ್ವವಾಗಿರುತ್ತಿದ್ದರು. ಇವೆರಡು ಸೇರಿ ಚರಿತ್ರೆಯ ನಿರ್ಮಾಣದಲ್ಲಿ ಒಂದು ಇನ್ನೊಂದನ್ನು ಶೋಷಿಸುತ್ತಾ ಪೋಷಿಸುತ್ತಾ ಬಂದಿವೆ. ಇವುಗಳಿಂದಾಗಿ ಜನಸಾಮಾನ್ಯರ ಬದುಕು ನಿಕೃಷ್ಟ ಸ್ಥಿತಿಗೆ ತಲುಪುತ್ತಿತ್ತು. ಈ ಕಾರಣಕ್ಕಾಗಿ ಇವುಗಳಿಗೆ ಪ್ರತಿಷ್ಠಿತ ಶಕ್ತಿಗಳ ಮೇಳ ಎಂದು ಕರೆದಿರುವರು. ಸಾಮಾನ್ಯ ಜನರು ಏನಾದರೂ ಪರವಾಗಿಲ್ಲ ತಾನು ಮಾತ್ರ ಚೆನ್ನಾಗಿರಬೇಕು ಎನ್ನುವುದೇ, ಇವರ ಮೂಲ ಉದ್ದೇಶ ಎನ್ನುವುದರಲ್ಲಿ ಸಂದೇಹವಿಲ್ಲ. ನಂಗಲಿಯವರ ಈ ಅಭಿಪ್ರಾಯ ಪ್ರಾಚೀನ ಮತ್ತು ಆಧುನಿಕ ಕಾಲದ ಚರಿತ್ರೆಯ ಗ್ರಹಿಕೆಗೆ ನಿಲುಕದ ವಿಚಾರ ಮತ್ತು ವಾಸ್ತವವು ಹೌದು ಇದರ ಜೊತೆಗೆ ಲಿಂಗನೆಲೆಯನ್ನು ಭಾಷಾನೆಲೆಯನ್ನು ಪರಿಭಾವಿಸಿ ಚರಿತ್ರೆಯ ಹೊಸ ಓದಿಗೆ ತೊಡಬೇಕಾಗಿದೆ. ಲಿಂಗ, ವರ್ಗ, ಜಾತಿಯಾಧಾರಿತವಾದ ಸಾಮಾಜಿಕ ಬದುಕು ಪ್ರಭುತ್ವದ ಸ್ವರೂಪ ಮತ್ತು ಸಾಮರ್ಥ್ಯವನ್ನು ನಿರ್ಧರಿಸುತ್ತವೆ. ಬಲಿಷ್ಠ ಶಕ್ತಿಗಳ ಬಲಾಬಲದ ಪ್ರಶ್ನೆ ಮತ್ತು ಅಸ್ತಿತ್ವದ ಕಾರಣಕ್ಕಾಗಿ ಪ್ರಭುತ್ವ ಹಿಂಸೆಯನ್ನು ಪೋಷಿಸಿರುತ್ತವೆ. ಲಿಂಗ, ಜಾತಿ, ವರ್ಗಕಾರಣದ ಬಲಿಷ್ಠ ನೀತಿಗಳು ಪ್ರಭುತ್ವದ ಅಸ್ತಿತ್ವಕ್ಕೆ ಸಹಾಯ ನೀಡಿವೆ. ವರ್ಗಮೂಲದಿಂದ ಕಾಣಿಕೊಳ್ಳುವ ಪ್ರಭುತ್ವಕ್ಕೆ ಆರ್ಥಿಕ ನೆಲೆಯ ವಿದ್ಯಮಾನಗಳು ಕಾಲದಿಂದ ಕಾಲಕ್ಕೆ ಸ್ಥಿತ್ಯಂತರಗೊಂಡು ಪ್ರಭುತ್ವವನ್ನು ಗಮನಿಸಿದರೂ ಅಧಿಕಾರ, ನಿಯಂತ್ರಣ, ಶೋಷಣೆ, ದಬ್ಬಾಳಿಕೆ, ದಮನ ಮುಂತಾದವುಗಳೇ ಪ್ರಮುಖವಾಗಿರುತ್ತವೆ. ಶಕ್ತಿ ಮೂಲದ ರಾಜಕಾರಣದ ಪ್ರಭುತ್ವದ ಆತ್ಮದಂತೆ ಕೆಲಸ ಮಾಡಿದೆ. ಒಟ್ಟಿನಲ್ಲಿ ಸಮಾಜದ ಎಲ್ಲಾ ರಂಗದಲ್ಲೂ 'ಪ್ರಭುತ್ವ' ತುಂಬಾ ಮಹತ್ವದ ಪಾತ್ರ ವಹಿಸಿಕೊಂಡಿದೆ. ಅದು ಯಜಮಾನನಾಗಿ, ಅಧಿಕಾರ ನಡೆಸುತ್ತದೆ. ಯುದ್ಧ, ಹಿಂಸೆಗಳನ್ನು ಹುಟ್ಟುಹಾಕುತ್ತದೆ. ನಾಡು ಗಡಿಗಳನ್ನು ನಿರ್ದಿಷ್ಟಗೊಳಿಸುತ್ತದೆ. ಆ ಪ್ರದೇಶದಲ್ಲಿ ತನ್ನ ಆಡಳಿತ ರೂಪಿಸಲು ಪ್ರಯತ್ನಿಸುತ್ತಿರುತ್ತದೆ. ತನ್ನ ಪ್ರತಿಷ್ಠೆಯ ಪರಾಕಾಷ್ಠೆಯನ್ನು ಮೆರೆಯುತ್ತದೆ. ಒಡೆತನ, ಸುಲಿಗೆ, ದರೋಡೆ, ನಿರಂತರವಾಗಿರುವಂತೆ ವ್ಯವಸ್ಥೆಗೊಳಿಸುತ್ತದೆ. ಅದನ್ನು ಹಿಮ್ಮೆಟ್ಟಿಸುವ ಕೆಲಸಕ್ಕೆ ಕೈ ಹಾಕುತ್ತದೆ. ಕಾಯಿದೆ, ಕಾನೂನನ್ನು ರಚಿಸುತ್ತದೆ. ಕಲಾವಿದರು ವಿದ್ವಾಂಸರನ್ನು ತತ್ವಜ್ಞಾನಿಗಳನ್ನು ಪೋಷಿಸಿ ಪ್ರೋತ್ಸಹಿಸಿ ಸಾಕುತ್ತದೆ. ಉಳಿಗಮಾನ್ಯ ಸಮಾಜ ರೂಪಿಸಿದ ಪ್ರಭುತ್ವ ಹಲವು ರೂಪದ ಯಜಮಾನಿಕೆಯ ಹುಟ್ಟಿಗೆ ಕಾರಣವಾಗಿದೆ. ಸ್ವಾರ್ಥ ಮೂಲದಿಂದ, ದುರಾಸೆ ಮೂಲದಿಂದ ಮನುಷ್ಯ ರೂಪಿತ ಈ ಯಜಮಾನಿಕೆ ನಿರಂತರ ಬಲಹೀನರನ್ನು, ಶೋಷಣೆಗೊಳಪಡಿಸುತ್ತಲೇ ಇರುತ್ತದೆ. ಪ್ರಜಾಪ್ರಭುತ್ವದ ದಿನಗಳಲ್ಲಿ ಜಾಗತೀಕರಣ, ಉದಾರೀಕರಣ, ಕೈಗಾರಿಕೀಕರಣ, ವಸಾಹತುಶಾಹಿ, ನವವಸಾಹತುಶಾಹಿ ಬಹುರಾಷ್ಟ್ರೀಯ ಕಂಪನಿಗಳ ಮಾಲೀಕತ್ವ, ಐಟಿ. ಬಿಟಿ. ಕಂಪನಿಗಳಂತ ಖಾಸಗಿ ಸಂಸ್ಥೆಗಳು ಪ್ರಭುತ್ವದ ಹೊಸ ಮಾದರಿಗಳು. ಈ ಮಾದರಿಗಳು ಆಧುನಿಕ ಚರಿತ್ರೆಯ ನಿರ್ಮಾತೃಕೆಗಳಾಗಿವೆ.

**ಅಡಿಟಿಪ್ಪಣಿಗಳು**

1. ಡಾ.ಸಿ.ವೀರಣ್ಣ ಕನ್ನಡ ಕಾವ್ಯ ಕಂಡ ಹೆಣ್ಣು 1999–ಪುಟ 6
2. ಎಂಗೆಲ್ಸ್ ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉದಯ 1980 (ಕನ್ನಡ ಅನುವಾದ) ಪುಟ–35
3. ಅದೇ ಪುಟ.
4. ಡಾ.ಸಿ. ವೀರಣ್ಣ ಕನ್ನಡ ಕಾವ್ಯಕಂಡ ಹೆಣ್ಣು 1999 ಪುಟ 6.
5. ಎಂಗೆಲ್ಸ್ ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉದಯ 1980(ಕನ್ನಡ ಅನುವಾದ) ಪುಟ 39.
6. ಡಾ.ಸಿ.ವೀರಣ್ಣ ಕನ್ನಡ ಕಾವ್ಯಕಂಡ ಹೆಣ್ಣು 1999 ಪುಟ 2.
7. ಅಮೃತ ಡಾಂಗೆ, ಭಾರತ ಸಂಘಜೀವನದಿಂದ ಗುಲಾಮಗಿರಿಗೆ 1983 ಪುಟ 43.
8. ಅಮೃತ ಡಾಂಗೆ ಭಾರತ ಸಂಘ ಜೀವನದಿಂದ ಗುಲಾಮಗಿರಿಗೆ 1983 ಪುಟ 49.
9. ಕೆ.ಸದಾಶಿವ ಪ್ರಾಚೀನ ಭಾರತದ ಇತಿಹಾಸ 2004 ಪುಟ 88–89.
10. ಅಮೃತ ಡಾಂಗೆ ಭಾರತ ಸಂಘಜೀವನದಿಂದ ಗುಲಾಮಗಿರಿಗೆ, 1983. ಪುಟ 66–67.
11. ಡಾ. ಓ.ಆರ್.ಚಂದ್ರಶೇಖರ, ದಲಿತ ಅಧ್ಯಾಯನ 2005. ಪುಟ 62.
12. ಎನ್.ಎ.ಪಾಟೀಲ ಪ್ರಾಚೀನ ಭಾರತೀಯ ರಾಜಕೀಯ ವಿಚಾರಗಳು ಮತ್ತು ಸಂಸ್ಥೆಗಳು 1987. ಪುಟ 22.
13. ಅದೇ ಪುಟ 25.
14. ಅದೇ ಪುಟ 26.
15. ಎನ್.ಎ. ಪಾಟೀಲ ಪ್ರಾಚೀನ ಭಾರತೀಯ ರಾಜಕೀಯ ವಿಚಾರಗಳು ಮತ್ತು ಸಂಸ್ಥೆಗಳು 1987 ಪುಟ 26.
16. ಅದೇ 26.
17. ಅದೇ ಪುಟ 26.
18. ಡಾ.ಟಿ.ಆರ್.ಚಂದ್ರಶೇಖರ ದಲಿತ ಅಧ್ಯಯನ 2005 ಪುಟ 63
19. ಅದೇ ಪುಟ 63.
20. ಬರಗೂರು ರಾಮಚಂದ್ರಪ್ಪ ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ 1993 ಪುಟ 01.
21. ಡಾ.ಟಿ.ಆರ್. ಚಂದ್ರಶೇಖರ ದಲಿತ ಅಧ್ಯಾಯನ 2005 ಪುಟ 65.
22. ಡಾ. ಜಿ.ಆರ್.ತಿಪ್ಪೇಸ್ವಾಮಿ. ವಿಚಾರ ಸಾಹಿತ್ಯ 2000–2001 ಪುಟ 10.